ಸಂಚಿಕೆ

೦೩

ಮಾರ್ಚ್ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಬೃಂದಾವನ

Karnataka Cultural Organization – Brindavana (KCOB) 501(C)(3), NJ

Copyright © KCO – Brindavana

# ಬೃಂದಾವನ ವಾಣಿ

**ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ**



## ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ವನಿತಾವಾಣಿ, ಪ್ರತಿಭೆ | ಪು ೧೫-೧೬ |
| ಹಿನ್ನೋಟ | ಪು ೨ | ಸಹಾಯ ಹಸ್ತ | ಪು ೧೭ |
| ವ್ಯಕ್ತಿ ಪರಿಚಯ | ಪು ೩ - ೪ | ಕ್ಯಾಮೆರಾ ಕಣ್ಣಿಂದ | ಪು ೧೭ |
| ಹೀಗೊಂದು ಪ್ರಶ್ನೆ | ಪು ೫ | ಮುನ್ನೋಟ | ಪು ೧೮ |
| ಸಾಹಿತ್ಯ ವಾಣಿ | ಪು ೬ - ೧೨ | ಹಾಗೆ ಸುಮ್ಮನೆ... | ಪು ೧೮ |
| ಪುಟಾಣಿ ಪ್ರಪಂಚ | ಪು ೧೩ - ೧೪ | ಓದುಗರ ಓಲೆಗಳು | ಪು ೧೯ |



**ಸಂಪಾದಕ ಮಂಡಳಿ**


ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ಸರಿತಾ ನವಲಿ
ಸಂಪಾದಕರು


ಅಹೀಶ್ ಭಾರದ್ವಾಜ
ಸಂಪಾದಕ ವರ್ಗ


ಡಾ. ಅಶೋಕ್ ಕಟ್ಟೀಮನಿ
ಸಂಪಾದಕ ವರ್ಗ


ಕಾವ್ಯಾ ಕಡಮೆ
ನಾಗರಕಟ್ಟೆ
ಸಂಪಾದಕ ವರ್ಗ


ರಾಘವೇಂದ್ರ
ಕುಂದಲಗುರ್ಕಿ
ಸಂಪಾದಕ ವರ್ಗ


ಕೇಶವ ಪ್ರಶಾಂತ್
ಸಂಪಾದಕ ವರ್ಗ


## ಅಧ್ಯಕ್ಷರ ಮಾತು.....



**ನ್ಯೂ ಜೆರ್ಸಿ ಮತ್ತು ವಿಶ್ವದೆಲ್ಲೆಡೆ ಹರಡಿರುವ ಕನ್ನಡ ಬಾಂಧವರಿಗೆ ಶುಭಾಶಯಗಳು !**

ಹೌದು, ನಮ್ಮ ಬೃಂದಾವನ ವಾಣಿ ಈಗ ನ್ಯೂ ಜೆರ್ಸಿ ಅಲ್ಲದೆ ವಿಶ್ವದೆಲ್ಲೆಡೆ ಹರಡಿದೆ. ಅಮೆರಿಕಾದ ಹಲವಾರು ರಾಜ್ಯ, ಯುರೋಪ್, ಮಿಡ್ಲ್ ಈಸ್ಟ್ ದೇಶಗಳಲ್ಲದೆ, ಕರ್ನಾಟಕ ಮತ್ತು ಭಾರತದ ಎಲ್ಲೆಡೆ ನಮ್ಮ ಕನ್ನಡ ಸಹೃದಯರು ಬೃಂದಾವನ ವಾಣಿಯ ಓದುಗರಾಗಿದ್ದಾರೆ. ಒಂದು ರೀತಿಯಲ್ಲಿ ವಿಶ್ವವ್ಯಾಪಿಯಾಗಿ ಈ ಇ-ಪತ್ರಿಕೆ, ಹೊಸ ಸಂಚಲನ ಮೂಡಿಸಿದೆ.

ಚಳಿಯ ಪ್ರಖರತೆಗೆ ನಲುಗಿದ ನ್ಯೂ ಜೆರ್ಸಿ , ಈಗ ವಸಂತಾಗಮನಕ್ಕೆ ಸಜ್ಜಾಗುತ್ತಿದೆ. ಅಂತೆಯೇ ,ವಸಂತ ಋತುವಿನ ಆಗಮನಕ್ಕಾಗಿ ಬೃಂದಾವನ ಮಿಲನ ತಂಡವೂ ಸಿದ್ಧವಾಗುತ್ತಿದೆ! ಏಪ್ರಿಲ್ ೯ ರ ವಸಂತೋತ್ಸವದ ತಯಾರಿ ನಡೆದಿದೆ. ಅಂದಹಾಗೆ ,ಇದು ಬೃಂದಾವನ 'ಮಿಲನ' ತಂಡದ ಎರಡನೇ ವರುಷ. ಎಲ್ಲಾ ಕಾರ್ಯಕ್ರಮಗಳು ಭರದಿಂದ ನಡೆದಿವೆ.

ಈಸ್ಟ್ ವಿಂಡ್ಸರ್ ಲೈಬ್ರರಿಯಲ್ಲಿ ಜ-9 ರಂದು ಎರಡನೇ ಕನ್ನಡ ಶಾಲೆ ಶುರುವಾಗಿದೆ ಎಂದು ತಿಳಿಸಲು ಹರ್ಷವಾಗಿದೆ. ನ್ಯೂ - ಜೆರ್ಸಿಯಲ್ಲಿ ಕನ್ನಡ ಶಾಲೆ ಬೃಂದಾವನ 'ಮಿಲನ ' ತಂಡದ ದೊಡ್ಡ ಕನಸು. ನಮ್ಮ ಕನ್ನಡದ ಕಂದಮ್ಮಗಳಿಗೆ ನವೀನ ರೀತಿಗಳಲ್ಲಿ, ಕನ್ನಡ ಸರಿಯಾಗಿ ಮಾತಾಡಲು, ಓದಲು, ಬರೆಯಲು ಕಲಿಸಬೇಕೆಂಬ ಉದ್ದೇಶದಿಂದ ಶುರುವಾದ ಸೌತ್ ಬ್ರುನ್ಸ್ವಿಕ್ ಮತ್ತು ಈಸ್ಟ್ ವಿಂಡ್ಸರ್ ಶಾಲೆಯಲ್ಲಿ ಈಗ 60 ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ. ಇನ್ನು ಹೆಚ್ಚು ಶಾಲೆ ತೆರೆಯಬೇಕೆಂಬ ಉತ್ಸಾಹ ನಮ್ಮ ಶಾಲೆಯ ಸ್ವಯಂ ಸೇವಕರುಗಳು ಹೊಂದಿದ್ದಾರೆ. ಸ್ವಯಂ ಸೇವಕರ ಈ ಉತ್ಸಾಹಕ್ಕೆ ಬೃಂದಾವನ ಸದಾ ಚಿರಋಣಿ.

ಕನ್ನಡ ಶಾಲೆಗಳ ಈ ಕನಸನ್ನು ನನಸು ಮಾಡಲು ನಮಗೆ ನಿಮ್ಮ ಸಹಕಾರದೊಂದಿಗೆ, ಡೊನೇಷನ್ ಸಹ ಅತ್ಯವಶ್ಯಕ.ಇದಕ್ಕೆ ಆನ್ಲೈನ್ ವ್ಯವಸ್ಥೆಯನ್ನು ಮಾಡಲಾಗಿದೆ. www.brindavana.org ಗೆ ಹೋಗಿ ಬಲ ಭಾಗದಲ್ಲಿ Donate-Kannada Shaale @ Brindavana ಕ್ಲಿಕ್ಕಿಸಿ, ವಿವರಗಳನ್ನ ನೀಡಿ ಕ್ಲಿಕ್ಕಿಸಿದರೆ ಕ್ಷಣಾರ್ಧದಲ್ಲಿ ನಿಮಗೆ ಇ-ಮೇಲ್ ಮುಖೇನ ಚೀಟಿ ದೊರೆಯುವುದು. ನಿಮ್ಮ ಈ ಕಾಣಿಕೆ ೧೦೦% ಟ್ಯಾಕ್ಸ್ ರಹಿತ . ನಮ್ಮನ್ನ ಪ್ರೋತ್ಸಾಹಿಸಿ.

ಅಕ್ಕ - ವಿಶ್ವ ಕನ್ನಡ ಸಮ್ಮೇಳನ - ಅಟ್ಲಾಂಟಿಕ್ ಸಿಟಿ, ನ್ಯೂ ಜೆರ್ಸಿಯಲ್ಲಿ Sept - 2, 3 & 4 ರಂದು ಎಲ್ಲ ಕನ್ನಡ ಸಂಘಗಳ ಸಹಯೋಗದೊಂದಿಗೆ ನಡೆಯುತ್ತದೆ ಎಂದು ಅಕ್ಕ ಅಧ್ಯಕ್ಷ ರಾಜ್ ಪಾಟೀಲ್ ಅವರು ಘೋಷಿಸಿದ್ದಾರೆ. ಬೃಂದಾವನ ಅಲ್ಲದೆ ನಮ್ಮ ಸುತ್ತ ಮುತ್ತಲಿನ ಕನ್ನಡ ಸಂಘದ ಕನ್ನಡಿಗರು ಈ ದೊಡ್ಡ ಕನ್ನಡದ ಹಬ್ಬಕ್ಕೆ ಹೆಗಲು ಕೊಡಲು ಸಿದ್ದರಾಗುತ್ತಿದ್ದಾರೆ.

ಬೃಂದಾವನ ಕಾರ್ಯಕ್ರಮಗಳ ಜೊತೆ ಅಕ್ಕ ಕಾರ್ಯಕ್ರಮಗಳು ಸೇರಿಸಿದರೆ ಈ ವರುಷ ಪೂರ್ಣ ಕನ್ನಡ ಚಟುವಟಿಕೆಗಳ ಬಿಸಿ ಆರುವುದೇ ಇಲ್ಲ. ಒಟ್ಟಿನಲ್ಲಿ ನ್ಯೂ ಜೆರ್ಸಿಯಲ್ಲಿ 2016 ಕನ್ನಡ ಪ್ರೇಮಿಗಳಿಗೆ ಸುಗ್ಗಿ ತರುವುದಂತೂ ಖಂಡಿತ.

**-ಮಲ್ಲಿಕ್ ಪ್ರಸಾದ್ ಅಧ್ಯಕ್ಷರು, ಬೃಂದಾವನ**

## ಪ್ರಧಾನ ಸಂಪಾದಕರಿಂದ......

**ಎಲ್ಲರಿಗೂ ನಮಸ್ಕಾರ.**

ಇದು ನಮ್ಮ ಮೂರನೆಯ ಸಂಚಿಕೆ. ಅಂಬೆಗಾಲಿನಿಂದ ಹೊರಟ ಬೃಂದಾವನ ವಾಣಿಗೆ ಈಗ ವಸಂತ ಕಾಲ. ಅನೇಕ ಹೊಸ ಪ್ರಕಾರಗಳೊಂದಿಗೆ ಪ್ರಬುದ್ಧವಾಗಿ ಮೂಡಿಬರುತ್ತಿದೆ. ಇದಕ್ಕೆ ನಿಮ್ಮ ಪ್ರೀತಿ ಮತ್ತು ಸಹಕಾರವೇ ನೀರು ಮತ್ತು ಬೆಳಕು.

ಎರಡು ವಿಷಯಗಳನ್ನು ನಿಮ್ಮಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ಇದೊಂದು ಮನ ಕಲುಕುವ ಸಂಗತಿ .ಭಾರತದ ಅತಿ ಕಠಿಣ ಗಡಿ ಪ್ರದೇಶವಾದ ಸಿಯಾಚಿನ್ ನಲ್ಲಿ ಪ್ರಾಣವನ್ನೇ ಲೆಕ್ಕಿಸದೆ ತಾಯಿ ನಾಡನ್ನು ಕಾಯುತ್ತಿದ್ದ ಕನ್ನಡ ನಾಡಿನ ಹೆಮ್ಮೆಯ ವೀರ ಕುವರರಾದ ಯೋಧ ಧಾರವಾಡ ಜಿಲ್ಲೆಯ ಹನುಮಂತಪ್ಪ ಕೊಪ್ಪದ, ಹಾಸನ ಜಿಲ್ಲೆಯ ನಾಗೇಶ್ ಮತ್ತು ಹೆಚ್. ಡಿ. ಕೋಟೆಯ ಮಹೇಶ್ ಹಿಮಪಾತದಲ್ಲಿ ವೀರ ಮರಣವನ್ನಪ್ಪಿ ನಮ್ಮನ್ನಗಲಿರುವುದು ನಮ್ಮ ದುರ್ದೈವ ಮತ್ತು ತುಂಬಲಾರದ ನಷ್ಟ. ಯೋಧರ ಅಗಲಿಕೆ ಭರಿಸುವ ಶಕ್ತಿ ಅವರ ಕುಟುಂಬಕ್ಕೆ ಕೊಡಲೆಂದು ದೇವರಲ್ಲಿ ಬೃಂದಾವನ ವಾಣಿ ಮತ್ತು ಮಿಲನ ತಂಡ ಪ್ರಾರ್ಥಿಸುತ್ತದೆ. ಈ ಕುಟುಂಬಕ್ಕೆ ಸಹಾಯಹಸ್ತ ಚಾಚಿ ತಲಾ ರೂ ೧ ಲಕ್ಷ ತಲುಪಿಸಿದ ನ್ಯೂ ಜೆರ್ಸಿಯ 'ಕಟ್ಟೆ ಬಾಯ್ಸ್' ತಂಡ ನಿಜಕ್ಕೂ ಅಭಿನಂದನಾರ್ಹ.

ಮತ್ತೊಂದು ವಿಷಯ, ನಮ್ಮ ಅನಿವಾಸಿ ಕನ್ನಡಿಗರ ಹಿರಿಯ ಚೇತನ, ಯು.ಆರ್.ಅನಂತಮೂರ್ತಿ ಮತ್ತು ಜಿ.ಎಸ್.ಎಸ್ ರವರ ಒಡನಾಡಿ, ದೀರ್ಘಕಾಲ ಸಂಶೋಧಕರಾಗಿ ಕಾರ್ಯ ನಿರ್ವಹಿಸಿ, ನಿವೃತ್ತರಾಗಿ ಕ್ಯಾಲಿಫೋರ್ನಿಯಾ - ದಲ್ಲಿ ನೆಲಸಿರುವ ಕನ್ನಡ ಪ್ರೇಮಿ ಶ್ರೀ. ನಾಗ ಐತಾಳರು ನಮ್ಮ ಕರೆಗೆ ಸಮ್ಮತಿಸಿ ಬೃಂದಾವನ ವಾಣಿಗೆ ಸಂದರ್ಶನ ಕೊಟ್ಟಿದ್ದಾರೆ. ಅವರಿಗೆ ತಂಡದ ಪರವಾಗಿ ಅನಂತ ವಂದನೆಗಳು.

ಪ್ರತಿಸಲದಂತೆ ಇಡೀ ತಂಡ ಪ್ರೀತಿಯಿಂದ ಸಂಚಿಕೆಯನ್ನು ರೂಪಿಸಿದ್ದಾರೆ. ನನ್ನ ವಂದನೆಗಳು.

ಮುಂದಿನ ಸಂಚಿಕೆಯಲ್ಲಿ ಸಿಗೋಣ.

**-ಸತ್ಯ**

## ಸಂಪಾದಕರಿಂದ......

**ನ್ಯೂ ಜೆರ್ಸಿ ಮತ್ತು ಸಮಸ್ತ ಕನ್ನಡ ಬಳಗಕ್ಕೆ ನಮಸ್ಕಾರಗಳು.**

ಬೃಂದಾವನ ವಾಣಿಯ ಸಂಚಿಕೆಗಳನ್ನು ನೀವೆಲ್ಲ ಓದಿ , ಮೆಚ್ಚಿದ್ದಕ್ಕೆ, ವಾಣಿಯ ಸಂಪಾದಕ ತಂಡದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ನಿಮ್ಮ ಸಲಹೆ ಮತ್ತು ಅನಿಸಿಕೆಗಳನ್ನು ತುಂಬು ಹೃದಯದಿಂದ ಸ್ವೀಕರಿಸಿ , ಮುಂಬರುವ ಸಂಚಿಕೆಗಳಲ್ಲಿ ಅವುಗಳನ್ನು ಅಳವಡಿಸಿಕೊಳ್ಳುಲು ಪ್ರಯತ್ನಿಸುತ್ತೇವೆ.

ನ್ಯೂ ಜೆರ್ಸಿಯಲ್ಲಿ ಮಂಜು ಕರಗಿ, ಚಳಿ ಹಿಂದೆ ಓಡಿ, ಗಿಡಮರಗಳಲ್ಲಿ ಚಿಗುರು ಮೂಡಿ , ವಸಂತ ಋತುವಿನ ಆಗಮನದ ಕಾತರ ಎಲ್ಲರ ಮನದಲ್ಲಿದೆ.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ 'ವಸಂತ ಗೀತೆ'ಕವನದ ಸಾಲುಗಳು ಹೀಗಿವೆ.

**"ಋತು ವಸಂತ ಬಂದನಿದೋ ,**
**ಉಲ್ಲಾಸವ ತಂದನಿದೋ-**
**ಮಬ್ಬು ಕವಿದ ಮೌನಗಳಲಿ,**
**ಹೊಸ ದನಿಗಳ ಹೊಮ್ಮಿಸಿ-**
**ಉದುರಿದೆಲೆಯ ಕೊಂಬೆಗಳಲಿ,**
**ಬಣ್ಣದ ಹೊಳೆ ಹರಿಯಿಸಿ-**
**ಬತ್ತಿದೆದೆಗೆ ಭರವಸೆಗಳ ,**
**ಹೊಸ ಬಾವುಟವೇರಿಸಿ-**
**ಹಳೆ ಗಾಡಿಗೆ ಹೊಸ ಕುದುರೆಯ,**
**ಹೊಸ ಗಾಲಿಯ ಜೋಡಿಸಿ ."**

ನಿಜ .ಕವಿ ಹೇಳುವಂತೆ, "ಹಳೆ ಗಾಡಿಗೆ ಹೊಸ ಕುದುರೆಯ , ಹೊಸ ಗಾಲಿಯ ಜೋಡಿಸುವ" ವಸಂತ ಋತುವಿನಂತೆ, 'ಬೃಂದಾವನ ವಾಣಿ' ಯ ಈ ಸಂಚಿಕೆ ಹೊಸ ಅಂಕಣಗಳನ್ನು, ಹೊಸ ವಿನ್ಯಾಸವನ್ನೊಳಗೊಂಡು ನಿಮ್ಮ ಮುಂದಿದೆ. 'ಅಂತರಂಗದ ಅನ್ವೇಷಣೆ , 'ಓ ನನ್ನ ಚೇತನ', 'ನಾನು ಓದಿದ ಪುಸ್ತಕ ' ಮುಂತಾದ ಹೊಸ ಅಂಕಣಗಳಿವೆ. ಋತು ವಸಂತ ತರುವ ಉಲ್ಲಾಸದಂತೆ, ವಾಣಿಯ ಈ ಸಂಚಿಕೆ ಓದುಗರಿಗೆ ಸಂತಸ ನೀಡುತ್ತದೆ ಎನ್ನುವ ಆಶಯ ನಮ್ಮದು. ನಿಮ್ಮ ಅನಿಸಿಕೆ, ಸಲಹೆಗಳಿಗೆ ಸದಾ ಸ್ವಾಗತ.

vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

ಮುಂದಿನ ಸಂಚಿಕೆಯಲ್ಲಿ ಮತ್ತೆ ಸಿಗೋಣ.

**-ಸರಿತಾ ನವಲಿ.**


ಮುಖಪುಟ ಚಿತ್ರ: ದೇವಾಲಯಗಳು ಪಟ್ಟದಕಲ್ಲು
ಕೃಪೆ: ಶ್ರೀನಿವಾಸ ನವಲಿ, ಬೆಂಗಳೂರು

ಸಂಪಾದಕೀಯ ಪುಟ ಚಿತ್ರ: ಬಾದಾಮಿ ಗುಹೆಗಳು
ಕೃಪೆ: ಶ್ರೀನಿವಾಸ ನವಲಿ, ಬೆಂಗಳೂರು

ಪತ್ರಿಕೆ ವಿನ್ಯಾಸ:
ಅಹೀಶ್ ಭಾರದ್ವಾಜ
ಕೇಶವ ಪ್ರಶಾಂತ್



Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ



ರಾಘವೇಂದ್ರ ಕುಂದಲಗುರ್ಕಿ

## "ನಿತ್ಯೋತ್ಸವ" ಕವಿ ಪ್ರೊ. ನಿಸಾರ್ ಅಹಮದ್ ರವರ ಜೊತೆ ಬೃಂದಾವನದಲ್ಲಿ ಪ್ರಸ್ತಾಪ

"**ಜೋ**ಗದ ಸಿರಿ ಬೆಳಕಿನಲ್ಲಿ ,ತುಂಗೆಯ ತೆನೆ ಬಳುಕಿನಲ್ಲಿ.. "ಈ ಸುಶ್ರಾವ್ಯ ಹಾಡನ್ನು ಕೇಳದ ,ಆ ಹಾಡಿನ ಸಾಹಿತ್ಯವನ್ನು ಅನುಭವಿಸದ ಕನ್ನಡಿಗರು ಬಹಳ ವಿರಳ..ಹಲವಾರು ದಶಕಗಳಿಂದ ಕರ್ನಾಟಕದ ನಾಡಗೀತೆಯಂತಾಗಿರುವ ನಿತ್ಯೋತ್ಸವ ಸಾಹಿತ್ಯದ ರಚನೆಕಾರರಾದ 80 ರ ಹರೆಯದ ಪ್ರೊ. ನಿಸಾರ್ ಅಹಮದ್ ರವರನ್ನು ಭೇಟಿಯಾಗುವ ಸುಯೋಗ , 'ಬೃಂದಾವನ ಕನ್ನಡ ಕೂಟ' ಮತ್ತು 'ಪ್ರಸ್ತಾಪ' ತಂಡ ಏರ್ಪಡಿಸಿದ್ದ , 'ಬೃಂದಾವನದಲ್ಲಿ ಪ್ರಸ್ತಾಪ' ಕಾರ್ಯಕ್ರಮದಲ್ಲಿ (ಬ್ರಿಡ್ಜವಾಟರ್ ನ್ಯೂ ಜೆರ್ಸಿಯಲ್ಲಿ), ಜನವರಿಯ ಜಿನು, ಜಿನುಗಿಸಿದ ಹಿಮದ ದಿನದಲ್ಲಿ ಒದಗಿ ಬಂದಿತ್ತು.




ಕಿಕ್ಕರಿದು ಸೇರಿದ್ದ ಸಾಹಿತ್ಯ ಆಸಕ್ತರಿಗೆ ಮೊದಲು ಅವರ ಕೆಲವು ಸಾಹಿತ್ಯದ ಸುಗಮ ಸಂಗೀತವನ್ನು ಶ್ರೀಮತಿ ಅನಿತಾ ಅನಂತಸ್ವಾಮಿ ಮತ್ತು ಅವರ ಮಕ್ಕಳು ,ಶ್ರೀಮತಿ ಲತಾ ನಟರಾಜ್, ಶ್ರೇಯಸ್ ಅವರ ಗಿಟಾರ್ ಪಕ್ಕವಾದ್ಯದೊಂದಿಗೆ ಸುಶ್ರಾವ್ಯವಾಗಿ ಹಾಡಿ ಎಲ್ಲರ ಮನಗೆದ್ದರು. ಸ್ಥಳೀಯ ಬರಹಗಾರರು ,ಉತ್ತಮ ವಾಗ್ಮಿಗಳು ಆದ ಶ್ರೀ ರಾಜಗೋಪಾಲ್ ಅವರು ಶ್ರೀಯುತ ನಿಸಾರ್ ಅಹಮದ್ ಅವರನ್ನು ಆತ್ಮೀಯವಾಗಿ ಹಲವಾರು ವರ್ಷಗಳ ಒಡನಾಟವನ್ನು ಹಂಚಿಕೊಂಡು ಸ್ವಾಗತಿಸಿದರು.

ಎಲ್ಲವನ್ನು ತನ್ಮಯತೆಯಿಂದ ಕೇಳಿದ ಶ್ರೀಯುತ ನಿಸಾರ್ ಅಹಮದ್ ಅವರು ನಂತರ ನಿರಂತರವಾಗಿ ಎರಡು ಗಂಟೆಗಳ ಕಾಲ ನಿರರ್ಗಳ ಹಾಸ್ಯಭರಿತ ಮಾತಿನಲ್ಲಿ ತಮ್ಮ ಐದು ದಶಕಗಳ ಬರವಣಿಗೆಯ ಅನುಭವವನ್ನು ಹಂಚಿಕೊಂಡರು." ಜೋಗದ ಸಿರಿ "ಸಾಹಿತ್ಯ ರಚನೆಯ ಸ್ಥಳವಾದ ಶಿವಮೊಗ್ಗ ,ಅಲ್ಲಿನ ಪರಿಸರದ ಪ್ರಭಾವ ,ಸಂದರ್ಭ , ಅವರ ಹಾಗು ಮೈಸೂರ್ ಅನಂತ ಸ್ವಾಮಿಯವರ ಹಲವಾರು ದಶಕಗಳ ಸಾಹಿತ್ಯ-ಸಂಗೀತ ಸಂಯೋಜನೆಯ ಒಡನಾಟ ಮತ್ತು ಸ್ನೇಹವನ್ನು ಎಲ್ಲರೊಡನೆ ಹಂಚಿಕೊಂಡರು.
ಅವರ " ಕುರಿಗಳು ಸಾರ್ ಕುರಿಗಳು "ಸಾಹಿತ್ಯವನ್ನು ಓದಿ ಅದರ ವೈಶಿಶ್ಟ್ಯತೆ ಮತ್ತು ಈಗಿನ ರಾಜಕೀಯ ಪರಿಸ್ಥಿತಿಯನ್ನು ಬಿಂಬಿಸುವ ಸಾಹಿತ್ಯವನ್ನು ವಿವರಿಸಿ , ದಶಕಗಳು ಕಳೆದರೂ ಕೆಲವು ಸಾಹಿತ್ಯಗಳು ಹೇಗೆ ಜೀವಂತವಾಗಿವೆ ಎಂಬ ನಿದರ್ಶನವನ್ನು ತೋರಿಸಿದರು. ಇನ್ನು ಹಲವಾರು ಸಾಹಿತ್ಯವನ್ನು ಮತ್ತು ಅವರ ಜೀವನದಲ್ಲಿ ನಡೆದ ಘಟನೆಗಳ ಅನುಭವದ ಮಜಲುಗಳನ್ನು ನಮ್ಮೊಂದಿಗೆ ಹಂಚಿಕೊಂಡು ಸೇರಿದ ಎಲ್ಲ ಸಾಹಿತ್ಯ ಪ್ರೇಮಿಗಳಿಗೆ ಜೀವನದ ಮರೆಯಲಾಗದ ಅನುಭವವನ್ನು ಕೊಟ್ಟರು.



ಮೇರು ಕವಿಗೆ ಸಮರ್ಪಣೆಯಂತೆ ಕೊನೆಯಲ್ಲಿ ಶ್ರೀಮತಿ ಅನಿತಾ ಅನಂತಸ್ವಾಮಿ ಯವರ ಜೊತೆಯಲ್ಲಿ ಎಲ್ಲ ಸಾಹಿತ್ಯಾಸಕ್ತರು ಸೇರಿ ಜೋಗದ ಸಿರಿಯ ಹಾಡನ್ನು ಹೇಳಿದ್ದು ಒಂದು ಸಂಯೋಜಿತವಾದ ಉಡುಗೊರೆ ಹಾಗು ರೋಮಾಂಚನದ ಅನುಭವ.
ಎಲ್ಲರೊಡನೆ ಫೋಟೊ ,ಸೆಲ್ಫಿಗಳಿಗೆ ನಗು-ನಗುತ್ತಾ ಬೆರೆತರಲ್ಲದೆ ,ಅವರ" ನಿತ್ಯೋತ್ಸವ " ಪುಸ್ತಕಕ್ಕೆ ಹಸ್ತಾಕ್ಷರವನ್ನು ಬರೆದು ಕೊಟ್ಟರು. ಬೃಂದಾವನದ ಅಧ್ಯಕ್ಷರಾದ ಶ್ರೀ ಮಲ್ಲಿಕ್ ಪ್ರಸಾದ್ ಹಾಗೂ ಕಾರ್ಯದರ್ಶಿಗಳಾದ ಡಾ.ಅಶೋಕ್ ಕಟ್ಟೀಮನಿ ಅವರು ಪ್ರೊ.ನಿಸಾರ್ ಅಹಮದ್ ಅವರಿಗೆ ನೆನಪಿನ ಕಾಣಿಕೆ ಕೊಡುವದರೊಂದಿಗೆ ಪ್ರಸ್ತಾಪ ಕೊನೆಗೊಂಡಿತ್ತು.

ಜೋಗದ ಸಿರಿಯ ಉದಯಕ್ಕೆ ಕಾರಣವಾದ ಅವರ ಅಂತರಾಳದ ಧ್ವನಿಯಾದ "ಕನ್ನಡ /ಕರ್ನಾಟಕದ ನಿತ್ಯೋತ್ಸವ ಬರೀ ನವಂಬರ್ ತಿಂಗಳಿನ ಭಾಷಣಗಳಿಗೆ ಸೀಮಿತವಾಗಿರದೆ ನಿತ್ಯವೂ ಎಲ್ಲರ ಮನೆಯಲ್ಲಿ ಉತ್ಸವ" ವಾಗಬೇಕೆಂಬ ಮಾತು ಎಷ್ಟು ಸತ್ಯ ಮತ್ತು ಸಮಂಜಸ.



ಡಾ. ಅಶೋಕ್ ಕಟ್ಟೀಮನಿ

## "ಬೃಂದಾವನ ಕನ್ನಡ ಕಲಿಸೋಣ " ಸಕವಿ- ಸರಳ ಕನ್ನಡ ಕಲಿಕಾ ವಿಧಾನ




**ನ್ಯೂ** ಜೆರ್ಸಿ ಕನ್ನಡ ಮಕ್ಕಳ ಕನ್ನಡ ಕಲಿಕೆಯ ಸಂಭ್ರಮ, ಬೃಂದಾವನ ಕನ್ನಡ ಕಲಿಸೋಣ ಕಾರ್ಯಕ್ರಮದ ಮಹತ್ತರ ಸಾಧನೆ..

ಬೃಂದಾವನ ಮಿಲನ ತಂಡ ತನ್ನ ಎರಡನೆಯ ಕನ್ನಡ ಶಾಲೆಯನ್ನ ಈಸ್ಟ್ ವಿಂಡ್ಸರ್ ಪಬ್ಲಿಕ್ ಲೈಬ್ರರಿಯಲ್ಲಿ ಪ್ರಾರಂಭಿಸಿದೆ ಎಂದು ತಮಗೆಲ್ಲ ತಿಳಿಸಲು ಸಂತೋಷವೆನಿಸುತ್ತದೆ. ಪ್ರತಿ ಶನಿವಾರ, ೩ ಗಂಟೆಗೆ ಪ್ರಾರಂಭವಾಗುವ ಈ ಕನ್ನಡ ಶಾಲೆ, ಪ್ರಿನ್ಸೆಟನ್, ಈಸ್ಟ್ ವಿಂಡ್ಸರ್ ಮತ್ತು ಮನ್ರೊ ಮಕ್ಕಳಿಗೆಲ್ಲ ಅತ್ಯಂತ ಹತ್ತಿರ. ಕನ್ನಡ ಪೋಷಕರೆಲ್ಲ ಈ ಸದವಕಾಶ ಉಪಯೋಗಿಸಿಕೊಳ್ಳಲಿ ಎನ್ನುವುದೇ ನಮ್ಮ ಆಸೆ.
ಕಳೆದ ಮೂರು ತಿಂಗಳಿಂದ ನಡೆಯುತ್ತಿರುವ ನಮ್ಮ ಸೌತ್ ಬ್ರೌನ್ಸ್ವಿಕ್ ಶಾಲೆಯಲ್ಲಿ ಈಗಾಗಲೆ ಸುಮಾರು ೪೦ ಕ್ಕೂ ಹೆಚ್ಚು ಮಕ್ಕಳು ಕನ್ನಡ ತರಗತಿಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಪ್ರತಿ ಶನಿವಾರ ಸರಿಯಾಗಿ ಮೂರು ಗಂಟೆಗೆ ಶಾಲೆಯ ಅಂಗಳದಲ್ಲಿ ನಿಂತಿರುವ ಕನ್ನಡ ಮಕ್ಕಳನ್ನು ನೋಡುವುದು, ಕನ್ನಡ ಗುಬ್ಬಿಗಳ ಚಿಲಿಪಿಲಿಯನ್ನು ಕೇಳುವುದು ಕಣ್ಣಿಗೆ, ಕಿವಿಗೆ ಒಂದು ಹಬ್ಬ.

ಈ ಸಲ ಡಿಸೆಂಬರ್ ತಿಂಗಳ ಬೃಂದಾವನದ ವಾರ್ಷಿಕ ಸಮಾರಂಭದಲ್ಲಿ ನಮ್ಮೆಲ್ಲರ ಅಚ್ಚುಮೆಚ್ಚಿನ ಕನ್ನಡ ಸಂಕೇತ ಗೀತೆ .. "ಕನ್ನಡದ ಕುಲದೇವಿ"...ಹಾಡುವ ಸಂದರ್ಭ ಬಹಳ ಸಂತೋಷ ತಂದಿತ್ತು. ಈ ಸಲ ಎಂದಿನಂತೆ ಹಿರಿಯ ಕನ್ನಡ ಕೂಟದ ಸದಸ್ಯರಲ್ಲದೆ, ನಮ್ಮ ಕನ್ನಡ ಶಾಲೆಯ ೪೦ ಕ್ಕೂ ಹೆಚ್ಚು ಮಕ್ಕಳು ಮತ್ತು ಕನ್ನಡ ಶಿಕ್ಷಕರು ಒಕ್ಕೊರಲಿನಿಂದ ಸಂಕೇತ ಗೀತೆ ಹಾಡಿದಾಗ ಕಣ್ಣು ತುಂಬಿ ಬಂತು.. ಶ್ರಮ ಸಾರ್ಥಕವೆನಿಸಿತು..ಮಕ್ಕಳು ಸಂಕೇತ ಗೀತೆ ಹಾಡುವಂತೆ ತರಬೇತಿ ನೀಡಿದ ಶ್ರೀಮತಿ ವಿನುತಾರ ಶ್ರಮ ಶ್ಲಾಘನೀಯ.

ಬೃಂದಾವನ ಕನ್ನಡ ಕಲಿಸೋಣ ಕಾರ್ಯಕ್ರಮ, ಕಡಲಾಚೆಯಲ್ಲಿರುವ ನಮ್ಮ ಕನ್ನಡ ಮಕ್ಕಳಿಗೆಲ್ಲ ಕನ್ನಡ ಕಲಿಯುವ ಅವಕಾಶವನ್ನ ಒದಗಿಸಿಕೊಡಬೇಕೆಂಬ ಉದ್ದೇಶದಿಂದ ಪ್ರಾರಂಭವಾಯಿತು. ಮುಖ್ಯವಾಗಿ ಕನ್ನಡ ಕಲಿಸುವ ಪರಿಶ್ರಮ ಎಲ್ಲ ಕನ್ನಡಿಗರದು. ಕೇವಲ ಮಕ್ಕಳಿಗೆ ಕನ್ನಡ ಕಲಿ ಎಂದು ನಿರ್ದೇಶಿಸದೆ, ನಾವೆಲ್ಲಾ ಸೇರಿ ಕನ್ನಡ ಕಲಿಸೋಣ...ಇದು ನಮ್ಮೆಲ್ಲರ ಜವಾಬ್ದಾರಿ ಎನ್ನುವ ತತ್ವದ ಮೇಲೆ ನಿಂತಿರುವ ಕನ್ನಡ ಕಲಿಸೋಣ ಕಾರ್ಯಕ್ರಮವನ್ನು ಕನ್ನಡ ಸ್ವಯಂ ಸೇವಕ ಶಿಕ್ಷಕರು, ಪೋಷಕರು ಹೆಗಲು ಕೊಟ್ಟು ನಡೆಸುತ್ತಿದ್ದಾರೆ ಎಂದು ಹೇಳಲು ಹೆಮ್ಮೆಯೆನಿಸುತ್ತದೆ.

ಕಳೆದ ವರ್ಷ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಮುಖ್ಯಮಂತ್ರಿ ಚಂದ್ರುರವರು ಉದ್ಘಾಟಿಸಿದಾಗ ನಮ್ಮ ಮುಂದೆ ಇದ್ದ ಮುಖ್ಯ ಉದ್ದೇಶ, ನಮ್ಮ ಕನ್ನಡ ಪಠ್ಯ ಕ್ರಮ ಅಮೆರಿಕದ ಕನ್ನಡ ಮಕ್ಕಳಿಗೆ ಹೆಚ್ಚು ಹತ್ತಿರವಾಗಿರಬೇಕು, ಸರಳವಾಗಿರಬೇಕು ಎನ್ನುವುದು. ಅದಕ್ಕೆ ಅನುಗುಣವಾಗಿ "ಸರಳ ಕನ್ನಡ ಕಲಿಕಾ ವಿಧಾನ" ವನ್ನು ರೂಪಿಸಿದ್ದೇವೆ. ಈ ಸಕವಿ ಪಠ್ಯ ಕ್ರಮದಲ್ಲಿ ಒಟ್ಟು ಎಂಟು ಹಂತಗಳಿವೆ. "ಸ್ವರ ದುಂಬಿ"ಯಿಂದ ಪ್ರಾರಂಭವಾಗಿ "ಪ್ರವೀಣ" ಹಂತಕ್ಕೆ ಬಂದಾಗ ಮಕ್ಕಳೆಲ್ಲ ಚೆನ್ನಾಗಿ ಕನ್ನಡ ಓದಲು, ಬರೆಯಲು ಮತ್ತು ಮಾತನಾಡುವದರಲ್ಲಿ ಸಂದೇಹವಿಲ್ಲ. ಈ ಪಠ್ಯಕ್ರಮದ ಪುಸ್ತಕವನ್ನ ಮಿಲನ ತಂಡ ಎಲ್ಲ ಮಕ್ಕಳಿಗೆ ಉಚಿತವಾಗಿ ಕೊಡುತ್ತಿದೆ.
ಕನ್ನಡ ಕಲಿಸುವ ಈ ಕಾರ್ಯಕ್ರಮದ ಯಶಸ್ಸಿಗೆ ಕನ್ನಡ ಸ್ವಯಂ ಸೇವಕ ಶಿಕ್ಷಕರು ಮತ್ತು ಪೋಷಕರು ಮುಖ್ಯ ಕಾರಣ. ತಮ್ಮ ಯಾವುದೇ ಕೆಲಸವಿದ್ದರೂ ಬಿಟ್ಟು ಕನ್ನಡ ಶಾಲೆಗೆ ತಪ್ಪದೇ ಬರುವ ಇವರೆಲ್ಲರಿಗೂ ಮಿಲನ ತಂಡದ ಹೃತ್ಪೂರ್ವಕ ಅಭಿನಂದನೆಗಳು. ಕನ್ನಡ ಉಳಿಯುವದರಲ್ಲಿ ಬೆಳೆಯುವದರಲ್ಲಿ ಸಂದೇಹವಿಲ್ಲ..

ಸಧ್ಯದಲ್ಲಿಯೇ ನಮ್ಮ ಮೂರನೆಯ ಕನ್ನಡ ಶಾಲೆ ಎಡಿಸನ್ ನಲ್ಲಿ ಪ್ರಾರಂಭವಾಗುತ್ತದೆ.


Copyright © KCO – Brindavana

ಸಂಚಿಕೆ
೦೨
ಮಾರ್ಚ್ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





## ಶ್ರೀ ನಾಗ ಐತಾಳ (ಆಹಿತಾನಲ)

ಸಂದರ್ಶಕರು:



ಕಾವ್ಯಾ ಕಡಮೆ ನಾಗರಕಟ್ಟೆ




**ಪರಿಚಯ:**

ನಾಗ ಐತಾಳರು ಉಡುಪಿ ಜಿಲ್ಲೆಯ ಕೋಟದವರು. ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಇಪ್ಪತ್ತಾರು ವರ್ಷಗಳ ಕಾಲ ಸಂಶೋಧಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ೨೦೦೧ರಲ್ಲಿ ನಿವೃತ್ತರಾಗಿದ್ದಾರೆ. ಸದ್ಯ ಕ್ಯಾಲಿಫೋರ್ನಿಯಾದಲ್ಲಿ ವಾಸ. ಅವರ ಹೊಸ ಪುಸ್ತಕಗಳು 'ಅಮೆರಿಕದಲ್ಲಿ ಕಂಡ ಕನಸು, ಕಟ್ಟಿದ ನೆನಪು' ಮತ್ತು 'ಸಾಹಿತ್ಯ ಸ್ಪಂದನ' ಕಳೆದ ತಿಂಗಳಷ್ಟೇ ಬಿಡುಗಡೆಯಾಗಿವೆ. ಈ ಪುಸ್ತಕಗಳ ಹೊರತಾಗಿ ಏಳು ಸೃಜನಶೀಲ ಕೃತಿಗಳನ್ನು ರಚಿಸಿದ್ದಾರೆ, ಕನ್ನಡದ ಹಿರಿಯ ಸಾಹಿತಿಗಳ ಕುರಿತು ಪ್ರಧಾನ ಸಂಪಾದಕರಾಗಿ ಹಲವಾರು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಕನ್ನಡ ಸಾಹಿತ್ಯಾಭಿವೃದ್ಧಿಗಾಗಿ 'ಮಂಥನ' ಎಂಬ ಸಾಹಿತ್ಯ ಕೂಟ ಸ್ಥಾಪಿಸಿ, ಕರ್ನಾಟಕದಿಂದ ಬಂದ ಸಾಹಿತಿಗಳ ಭಾಷಣಗಳನ್ನು ಏರ್ಪಡಿಸಿದ್ದಾರೆ. ಇವರ ಕನ್ನಡ ಸೇವೆಯನ್ನು ಗುರುತಿಸಿ ಹಲವಾರು ಸನ್ಮಾನ- ಗೌರವಗಳು ಇವರನ್ನು ಅರಿಸಿಕೊಂಡು ಬಂದಿವೆ.


**೧. ನಿಮ್ಮಲ್ಲಿ ಬರವಣಿಗೆಯ ಆಸಕ್ತಿ ಬೆಳೆಯಲು ನಿಮ್ಮ ಬಾಲ್ಯ, ಚಿಕ್ಕಂದಿನ ಮನೆಯ ಪರಿಸರ ಎಷ್ಟರ ಮಟ್ಟಿಗೆ ಕಾರಣ?**

ನನ್ನ ಬಾಲ್ಯದ ಪರಿಸರವೇನೂ ಅಂಥಾ ಹೆಚ್ಚಿನದಲ್ಲ. ನನ್ನ ತಾಯಿ ಹಾಡುತ್ತಿದ್ದ ಜೋಗುಳ ಹಾಡುಗಳು ನನಗೆ ತಿಳಿಯದಂತೆ ನನ್ನಲ್ಲಿ ಸಾಹಿತ್ಯಾಸಕ್ತಿ ಹುಟ್ಟಿಸಿರಬಹುದು. ಬೇಸಾಯ ಕುಟುಂಬದವನಾದ ನಮ್ಮ ಮನೆಯಲ್ಲಿ ಭತ್ತ ಕುಟ್ಟಲು ಬರುತ್ತಿದ್ದ ಕೂಲಿ ಹೆಂಗಳೆಯರು ಹಾಡುತ್ತಿದ್ದ ತ್ರಿಪದಿಗಳೂ ಜನಪದ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿಸಿರಬಹುದು. ಬಾಲ್ಯದಲ್ಲಿ ಶಾಲೆಯಲ್ಲಿ ಕನ್ನಡ ಕಲಿಸಿದ ಉಪಾಧ್ಯಾಯರೊಬ್ಬರ ನೆನಪು ಬರುತ್ತಿದೆ. ಅವರು "ಗೋವಿನ ಹಾಡ"ನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದು, ನನ್ನ ಆಸಕ್ತಿಯನ್ನು ಅವರು ಕೆರಳಿಸಿದ್ದಾರೆಂದು ಹೇಳಬಹುದೇನೋ! ಆದರೆ ಕಾಲೇಜು ವಿದ್ಯಾಭ್ಯಾಸದಲ್ಲಿ ಕನ್ನಡ ಪಾಠ ಹೇಳುತ್ತಿದ್ದ ಕನ್ನಡ ಪಂಡಿತರ ಜ್ಞಾಪಕವಾದಾಗಲೆಲ್ಲ ನನ್ನಲ್ಲಿ ಅವರ ಮೇಲೆ ಜಿಗುಪ್ಸೆ ಹುಟ್ಟುತ್ತಿದೆ. ಅವರು ಬೇಂದ್ರೆಯವರ "ಹಕ್ಕಿ ಹಾರುತಿದೆ ನೋಡಿದಿರಾ?" ಕವನದ ಮೇಲೆ ಮಾಡಿದ ವ್ಯಾಖ್ಯಾನ ಹೀಗಿದೆ: ‘ಹಕ್ಕಿ ಅಂದರೆ, ಪಕ್ಷಿ; ಹಾರುವುದು ಅಂದಾಗ ರೆಕ್ಕೆ ಬಿಚ್ಚಿ ಆಕಾಶದಲ್ಲಿ ತೇಲುತ್ತಿರುವುದು; ಅದನ್ನು ಕಂಡಿರಾ? ಇಲ್ಲಿ ಸೂಕ್ಷ್ಮವಾಗಿ ಕವಿಯ ಪ್ರಕೃತಿ ವರ್ಣನೆಯನ್ನು ಗಮನಿಸಬೇಕು’ ಎಂದು. ಆ ಕವನದಲ್ಲಿನ ಕಾಲನ ಪ್ರತಿಮೆಯನ್ನೇ ಅವರು ಅರಿಯದಾದರು. ಕೆಲವೊಮ್ಮೆ ಇಂಥ "ಬರಡು" ಹಿನ್ನೆಲೆಯೇ ಒಂದು ವಿಧದಲ್ಲಿ ನನ್ನ ಸಾಹಿತ್ಯಾಭಿರುಚಿಯನ್ನು ಕೆರಳಿಸಿರಬಹುದೋ ಏನೋ ಎಂದು ಆಶ್ಚರ್ಯ ಪಡುತ್ತಿದ್ದೇನೆ.



**೨. ನೀವು ಅರವತ್ತರ ದಶಕದಲ್ಲಿಯೇ ಅಮೆರಿಕೆಗೆ ವಲಸೆ ಬಂದವರು. ಈಗಿನಂತೆ 'ಇಂಟರ್ನೆಟ್ ಯುಗ'ವಲ್ಲದ ಆ ಕಾಲದಲ್ಲಿ ಕನ್ನಡ ಸಾಹಿತ್ಯಲೋಕದ ಜೊತೆಗೆ ನಿಕಟ ಸಂಪರ್ಕ ಇರಿಸಿಕೊಳ್ಳಲು ನಿಮಗೆ ಸಾಧ್ಯವಾಯಿತೇ? ಆ ನಿಟ್ಟಿನಲ್ಲಿ ನೀವು ಎದುರಿಸಿದ ಸವಾಲುಗಳೇನು?**

ಅರವತ್ತರ ದಶಕದಲ್ಲಿ ಅಮೆರಿಕದಲ್ಲಿ ಕನ್ನಡಿಗರ ಸಂಖ್ಯೆ ತೀರ ಕಡಿಮೆಯಾಗಿತ್ತೆಂದೇ ಹೇಳಬಹುದು. ಕನ್ನಡದಿಂದ ದೂರವಾಗಿದ್ದೇವೆಂಬ ಕೊರಗು ನಮ್ಮನ್ನು ಕಾಡುತಿತ್ತೆಂಬುದು ನಿಜ! ಅದರ ಪರಿಣಾಮವಾಗಿ ಇಲ್ಲಿನ ಕನ್ನಡ ಬಳಗವನ್ನು ಒಟ್ಟಾಗಿಸುವ ಪ್ರಯತ್ನ ಆ ಕಾಲದಲ್ಲಿ ನಮ್ಮ ಹೊಣೆಯಾಗಿತ್ತೆಂದು ಹೇಳಬಹುದು. ೬೦ರ ದಶಕದಲ್ಲಿ ಲಾಸ್ ಏಂಜಲಿಸ್‌ನ ನಮ್ಮ ಮನೆಯಲ್ಲಿ ಆ ವಲಯದಲ್ಲಿದ್ದ ಕೆಲವೇ ಕನ್ನಡಿಗರನ್ನು ಒಟ್ಟುಗೂಡಿಸಿ, ಭಾವಗೀತೆಗಳನ್ನು ಹಾಡಿಯೋ, ಭಜನೆ ಹಾಡಿಯೋ, ಅಥವಾ ಕರ್ನಾಟಕದ ವಿಶಿಷ್ಟತೆಯ ಮೇಲೆ ಚರ್ಚೆ ನಡೆಸಿಯೋ, ನಮ್ಮ ತೃಷೆಯನ್ನು ನೀಗಿಸಿಕೊಂಡ ದಿನಗಳು ಆಗಾಗ್ಗೆ ನೆನಪಿಗೆ ಬರುತ್ತಿದೆ. ಆಗಿನ ಕಾಲದಲ್ಲಿ ಅಷ್ಟೇ ಪ್ರಯತ್ನ ನಮ್ಮಿಂದ ಸಾಧ್ಯವಾಗಿತ್ತು. ಮುಂದೆ, ಡಿಟ್ರಾಯ್ಟ್‌ನ ಉತ್ಸುಕ ಕನ್ನಡಿಗರ ಸಾಹಸದಿಂದಾಗಿ ಅಮೆರಿಕದಲ್ಲೊಂದು ಕನ್ನಡ ಕೂಟದ ಸ್ಥಾಪನೆಯಾಯ್ತು. ಪರಿಣಾಮವಾಗಿ ದೇಶದ ಹಲವು ನಗರಗಳಲ್ಲಿ ಸ್ಥಳೀಯ ಕನ್ನಡ ಕೂಟಗಳು ಸ್ಥಾಪನೆಯಾದುವು. ಕನ್ನಡ ಕೂಟಗಳು ಮೊದಲಿಗೆ ಸೀಮಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದುವು. ಕ್ರಮೇಣ ನಾಟಕ, ಭರತ ನಾಟ್ಯ, ಮೊದಲಾದ ಕಾರ್ಯಕ್ರಮಗಳೂ ಸೇರಿದವು. ಈ ಮಧ್ಯೆ, ಕರ್ನಾಟಕದಿಂದ ಬಂದ ಸಾಹಿತಿಗಳು, ಕಲಾವಿದರು, ನಮ್ಮ ಸಾಹಿತ್ಯಿಕ, ಸಾಂಸ್ಕೃತಿಕ ಆಸಕ್ತಿಯನ್ನು ಕೆರಳಿಸಲು ಕಾರಣರಾದರು. ಮುಂದೆ ಕೈ ಬರಹಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸಲಾಯ್ತು. ಅವುಗಳಲ್ಲಿ, ಜನಪ್ರಿಯ ಕವನಗಳ ತುಣುಕು, ನಾಟಕಗಳ ಕೆಲವು ದೃಶ್ಯ, ಆಗಾಗ್ಗೆ ತಾವೇ ರಚಿಸಿದ ಕವನ, ಕತೆಗಳೂ ಪ್ರಕಟವಾದುವು. ಮುಂದೆ ಕಂಪ್ಯೂಟರ್ ಬಳಕೆಗೆ ಬಂದಾಗ ಈ ಪತ್ರಿಕೆಗಳನ್ನು ಕಂಪ್ಯೂಟರೀಕರಿಸಿ ಪ್ರಕಟಿಸಲು ಪ್ರಾರಂಭವಾಯ್ತು. ನನಗಿನ್ನೂ ಜ್ಞಾಪಕವಾಗುತ್ತಿದೆ, ಶಿಕಾಗೋ ವಿದ್ಯಾರಣ್ಯ ಕನ್ನಡ ಕೂಟದ ಮೊದಲ ಸಂಚಿಕೆ, ತೋನ್ಸೆ ಕೃಷ್ಣರಾಜು ಅವರ ಸಂಪಾದಕತ್ವದಲ್ಲಿ ಹೊರಬಂದ ದಿನಗಳು. ಅದರಲ್ಲಿ ಪ್ರಕಟವಾದ, "....ಇವಳ ಸೊಬಗನವಳಿಗಿಟ್ಟು ನೋಡ ಬಯಸಿದೆ; ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದೆ..." ಎಂಬ ಬಿ.ಎಂ.ಶ್ರೀ. ಯವರ ಕವನದ ಸಾಲು, ಬಂದು ನೆಲೆಸಿದ ಈ ನಾಡಿಗೆ ಹೊಂದಿಕೊಳ್ಳುವಲ್ಲಿ ನಮ್ಮ ಪ್ರಯತ್ನಗಳನ್ನು ಎಷ್ಟೊಂದು ಅರ್ಥಗರ್ಭಿತವಾಗಿ ಈ ಸಾಲುಗಳು ವಿವರಿಸುತ್ತವೆ!!!




ನಮ್ಮ ಸಾಹಿತ್ಯಾಸಕ್ತಿಯನ್ನು ಕೆರಳಿಸಲು ಭಾರತದಿಂದ ಬಂದ ಹಲವಾರು ಸಾಹಿತಿಗಳು ನೀಡಿದ ಪ್ರೋತ್ಸಾಹವನ್ನು ಇಲ್ಲಿ ಕೃತಜ್ಞತೆಯಿಂದ ನೆನೆಯಲೇ ಬೇಕು. ವೈಯಕ್ತಿಕವಾಗಿ ನಾನು, ಶಿವರಾಮ ಕಾರಂತ, ಅನಂತಮೂರ್ತಿ, ಶಿವರುದ್ರಪ್ಪ, ಲಕ್ಷ್ಮೀನಾರಾಯಣ ಭಟ್ಟ, ಚಂದ್ರಶೇಖರ ಕಂಬಾರ, ಭೈರಪ್ಪ, ಮತ್ತೂರು ಕೃಷ್ಣಮೂರ್ತಿ, ಗಿರೀಶ್ ಕಾರ್ನಾಡ್, ಡಿ. ಆರ್. ನಾಗರಾಜ, ವ್ಯಾಸರಾಯ ಬಲ್ಲಾಳ ಮುಂತಾದವರ ಭೇಟಿಯಿಂದ ಬಹಳಷ್ಟು ಲಾಭ ಪಡೆದಿದ್ದೇನೆ ಹಾಗೂ ಕರ್ನಾಟಕದ ಸಾಹಿತಿಗಳೊಡನೆ ಸಂಪರ್ಕ ಬೆಳೆಸಿಕೊಳ್ಳಲು ಸಹಾಯವಾಯ್ತೆಂದು ಹೇಳಬಹುದು. ಈ ನಿಟ್ಟಿನಲ್ಲಿ, ಅಮೆರಿಕನ್ನಡಿಗರಲ್ಲಿ ಸಾಹಿತ್ಯಾಭಿರುಚಿ ಮೂಡಲು ಪ್ರೋತ್ಸಾಹ ನೀಡಿದ ಕೆಲವು ವ್ಯಕ್ತಿಗಳನ್ನು ಧನ್ಯತಾಭಾವನೆಯಿಂದ ನೆನೆಸಿಕೊಳ್ಳುತ್ತಿದ್ದೇನೆ. "ಅಮೆರಿಕನ್ನಡ"ವೆಂಬ ದ್ವೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದ ಹರಿಹರೇಶ್ವರ ದಂಪತಿಗಳು, ಮೊದಲಿಗೆ ಉಚಿತವಾಗಿ ಬರಹ ತಂತ್ರಾಂಶವನ್ನು ಒದಗಿಸಿ, ಅಮೆರಿಕನ್ನಡಿಗರಲ್ಲಿ ಹುದುಗಿದ್ದ ಸಾಹಿತ್ಯಾಭಿಮಾನವನ್ನು ಹೊಡೆದೆಬ್ಬಿಸಿದ, "ಬರಹ ಶೇಷಾದ್ರಿ ವಾಸು", ಅಮೆರಿಕನ್ನಡಿಗರ ಬರಹಗಳನ್ನು ತಮ್ಮ ಅಂತರ್ಜಾಲ ಪತ್ರಿಕೆ, "ದಟ್ಸ್ ಕನ್ನಡ"ದಲ್ಲಿ ಪ್ರಕಟಿಸಿ, ಪ್ರೋತ್ಸಾಹಿಸಿದ, ಶಾಮಸುಂದರ - ಇವರು ಅಂಥವರಲ್ಲಿ ಕೆಲವರು. ಅಲ್ಲದೆ ಇಲ್ಲಿ ನಮ್ಮ ವಲಸೆ ಜೀವನವೂ ನಮ್ಮ ಸಾಹಿತ್ಯಾಸಕ್ತಿ ವೃದ್ಧಿಯಾಗಲು ಕಾರಣವಾಯ್ತೆಂಬುದನ್ನು ನೆನೆಸಿಕೊಳ್ಳಲಿಚ್ಛೆಪಡುತ್ತೇನೆ. ಈಗ ಎಣಿಸಿದಲ್ಲಿ, ಮೊದಲಿಗೆ ಬಂದ ಕನ್ನಡ ವಲಸೆಗಾರರು ಅನುಭವಿಸಿದ ತಲ್ಲಣಗಳು ಕೆಲವರಿಗೆ, ಅದರಲ್ಲೂ ಇತ್ತೀಚೆಗೆ ಬಂದ ವಲಸೆಗಾರರಿಗೆ ಕ್ಷುಲ್ಲಕವಾಗಿ ಕಂಡೀತು. ಹಿಂದೆ ಬಂದ ಕನ್ನಡಿಗ ವಲಸೆಗಾರರು ಇಂದಿಗೂ ತಮ್ಮ ಸಂಕುಚಿತ ಪ್ರಪಂಚದಲ್ಲೇ ಹುದುಗಿ, ತಾವು ಅಂದು ನಡೆಸಿದ ಸಾಮಾನ್ಯ ಕಾರ್ಯಗಳನ್ನು ವೈಭವೀಕರಿಸುತ್ತಿದ್ದಾರೆಂಬ ಟೀಕೆಯನ್ನೂ ಕೇಳಿದ್ದೇನೆ. ಆದರೆ, ಹಿಂದಿನ ಅನುಭವಗಳೇ - ಅವೆಷ್ಟು ಈಗ ಕ್ಷುಲ್ಲಕವಾಗಿ ಕಂಡರೂ - ಮುಂದಿನ ಪ್ರಗತಿಗೆ ದಾರಿ ಎಂಬುದನ್ನು ಮರೆಯಬಾರದು.

(ಮುಂದಿನ ಪುಟಕ್ಕೆ ..)


Copyright © KCO – Brindavana

ಸಂಚಿಕೆ
೦೩
ಮಾರ್ಚ್ ೨೦೧೬

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





## ಶ್ರೀ ನಾಗ ಐತಾಳ (ಆಹಿತಾನಲ)

ಮುಂದುವರೆದುದು.. . . . .

**೩. ತಾವು ಸಂಪಾದಿಸಿದ ಕೃತಿಯೊಂದರ ಪ್ರಸ್ತಾವನೆಯಲ್ಲಿ 'ಸಾಹಿತ್ಯ ಒಂದು ಜನಾಂಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ' ಅಂತ ಹೇಳಿದ್ದೀರಿ. ಬದುಕಿನ ಬಹುಪಾಲು ಸಮಯವನ್ನು ತಾಯ್ನಾಡಿನ ಸಂಸ್ಕೃತಿಯಿಂದ ದೂರವಾಗಿಯೇ ಕಳೆದ ನೀವು ಎರಡೂ ನಾಡುಗಳ ಸಂಸ್ಕೃತಿ- ಸಂಘರ್ಷವನ್ನು ಹೇಗೆ ಎದುರಿಸಿದಿರಿ?**

ಕಳೆದ ೪೬ ವರ್ಷಗಳಿಂದ ನಾನು ಭಾರತದಿಂದ ದೂರವಾಗಿ ಉಳಿದುದು ನಿಜ. ಆದರೆ, ಭಾರತ, ಕನ್ನಡ ನಾಡು, "ಕನ್ನಡತನ" ಮಾತ್ರ ನನ್ನಿಂದ ದೂರವಾಗಿಯೇ ಇಲ್ಲ. ಇದು ಅತಿಶಯೋಕ್ತಿಯಾಗಿ ಕಾಣಬಹುದು; ಆದರೆ ಅಪ್ಪಟ ಸತ್ಯ. ಕನ್ನಡದಿಂದ ದೂರವಾಗಿದ್ದರೂ, ಕನ್ನಡತನ ನನ್ನ ಬೆನ್ನಿಗೆ ಅಂಟಿಕೊಂಡೇ ಬಂದಿದೆ. ಹಾಗಾಗಿ ಇಲ್ಲಿ ಸ್ವಲ್ಪ ಭಿನ್ನ ಸಂಸ್ಕೃತಿಯ ನಡುವೆ ಜೀವನ ನಡೆಸುತ್ತಿದ್ದರೂ, ನಾನು ಕನ್ನಡಿಗನಾಗಿಯೇ - ಬೇಕಾದರೆ ಅಮೆರಿಕನ್ನಡಿಗನೆಂದೇ ಹೇಳಿ - ಉಳಿದಿದ್ದೇನೆಂಬ ಹೆಮ್ಮೆ ಇದೆ. ಅಮೆರಿಕನ್ನಡಿಗನೆಂದಾಗ ಇಲ್ಲಿ ಅಮೆರಿಕದ "ಸಂಸ್ಕೃತಿ"ಯೊಡನೆ ಹೊಂದಾಣಿಕೆ ಮಾಡಿಕೊಂಡ ಸುಳಿವು ಸಿಗುತ್ತದಲ್ಲವೇ?




ಇನ್ನು ಸಂಸ್ಕೃತಿ - ಸಂಘರ್ಷದ ಬಗ್ಗೆ ನನ್ನ ಉತ್ತರವಿಷ್ಟೆ! ಸಂಘರ್ಷ ಹಾಗೂ ಸಂಧಾನ ಇವೆರಡೂ ನಮ್ಮ ಮನೋಭಾವದ ಮೇಲೆ ಹೊಂದಿಕೊಂಡಿರುತ್ತದೆ. ಪ್ರತಿಯೊಂದು ಸಂಸ್ಕೃತಿಯಲ್ಲೂ ಒಂದಲ್ಲ ಒಂದು ಸಂಘರ್ಷವಿದ್ದೇ ಇರುತ್ತದೆ. ಹಾಗೆಂದು, ಒಂದು ಸಂಸ್ಕೃತಿಯನ್ನು ಕೀಳು ದೃಷ್ಟಿಯಿಂದ ನೋಡಬಾರದು. ನಾವೇ ಆರಿಸಿಕೊಂಡು ಇಲ್ಲಿ ನೆಲೆಸುವ ನಿರ್ಧಾರ ಕೈಕೊಂಡಿರುವಾಗ, ಇಲ್ಲಿನ ನಡೆ-ನುಡಿ, ಜೀವನಕ್ರಮಗಳನ್ನು ಒಪ್ಪಿ, ಅವುಗಳಿಗೆ ಹೊಂದಿಕೊಂಡು ಹೋಗುವ ಕರ್ತವ್ಯವೂ ನಮ್ಮದಾಗಿದೆ. ಅಂದರೆ, ಇಲ್ಲಿಯ ಸಂಸ್ಕೃತಿಯೊಡನೆ ಒಡಂಬಡಿಕೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ನಾವು ಬೆಳೆಸಿಕೊಂಡು ಬರಬೇಕು. ಇಲ್ಲಿಗೆ ವಲಸೆ ಬಂದ ಹೊಸದರಲ್ಲಿ ಈ ಹೊಂದಿಕೊಳ್ಳುವ ಪ್ರವೃತ್ತಿ ಸ್ವಲ್ಪ ಕಷ್ಟವಾಗಿದ್ದೇನೋ ನಿಜ, ಆದರೆ, ದಿನಕಳೆದಂತೆ ನನ್ನ ಜವಾಬ್ದಾರಿಯ ಕುರಿತು ನಾನೇ ಎಚ್ಚರಗೊಂಡು, ನಿಧಾನವಾಗಿ ಇಲ್ಲಿಯವರ ನಡತೆಗಳನ್ನು ಒಪ್ಪಿಕೊಳ್ಳಲಾರಂಭಿಸಿದೆ. ಈ ಪ್ರಕ್ರಿಯೆಯಲ್ಲಿ, ಎಳೆವಯಸ್ಸಿನ ನನ್ನ ಮಕ್ಕಳು ಸುಲಭವಾಗಿ ಹೊಂದಿಕೊಂಡು, ನನಗೆ ತುಂಬಾ ಸಹಾಯ ಮಾಡಿದ್ದಾರೆ. ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡೇ, ಇಲ್ಲಿಯವರೊಡನೆ ಬೆರೆಯಬಹುದು ಎಂಬ ಪಾಠ ಕ್ರಮೇಣ ಕಲಿಯುತ್ತ ಬಂದೆ. ಆಗ, ಪರಿಚಯದ ಪರಿಸರವಲ್ಲದ ಈ ನಾಡಿನಲ್ಲಿ ನಾವು "ಒಂಟಿ'ಯಾಗಿದ್ದೇವೆಂಬ ಮನೋಭಾವ ನನ್ನಿಂದ ದೂರವಾಗುತ್ತ ಬಂತು. ನಮ್ಮ ನಾಡಿನ ಮೇಲೆ ನಾವು ಅಭಿಮಾನವಿಡುವುದು ಸ್ವಾಭಾವಿಕವೇ! ಆದರೆ, ಅದು ಇನ್ನೊಂದು ಸಂಸ್ಕೃತಿಯ ಮೇಲೆ ಅಭಿಮಾನ ಬೆಳಸುವಲ್ಲಿ ಅಡ್ಡಿ ಬರಬಾರದಲ್ಲವೇ? ಅದು "ಸಂಧಾನ"ಪ್ರವೃತ್ತಿಯಿಂದ ಮಾತ್ರ ಸಾಧ್ಯ!

**೪. ನೀವು ಬರವಣಿಗೆಯ ಜೊತೆಜೊತೆಗೆ ಕುವೆಂಪು-ಕಾರಂತ-ಬೇಂದ್ರೆ ಮುಂತಾದವರ ಸಾಹಿತ್ಯದ ಕುರಿತು ಗ್ರಂಥಗಳನ್ನು ಸಂಪಾದಿಸಿದ್ದೀರಿ. ನಿಮ್ಮ ಪ್ರಕಾರ 'ಸೃಜನಶೀಲ ಸಾಹಿತಿ' ಮತ್ತು 'ಸಂಪಾದಕ' ಈ ಎರಡರಲ್ಲಿ ಹೃದಯಕ್ಕೆ ಹತ್ತಿರವಾದ ಆಯ್ಕೆ ಯಾವುದು? ಏಕೆ?**

ನಿಜ, ನಾನು ಇದುವರೆಗೆ ಕಾರಂತ, ಕುವೆಂಪು, ಪುತಿನ, ಮಾಸ್ತಿ, ರಾಜರತ್ನಂ, ಅನಂತಮೂರ್ತಿ, ಬೇಂದ್ರೆ - ಇವರ ಸಾಹಿತ್ಯದ ಕುರಿತು ಕೃತಿಗಳನ್ನು ಸಂಪಾದಿಸಿದ್ದೇನೆ. ಹಾಗೆಯೇ ಬೇರೆ ೬ ಕೃತಿಗಳನ್ನೂ ಪ್ರಕಟಿಸಿದ್ದೇನೆ. ಸಂಪಾದಕ ಮತ್ತು ಸ್ವಂತ ಬರವಣಿಗೆ - ಇವೆರಡರಲ್ಲಿ ನನಗೆ ಯಾವುದು ಆಪ್ತವಾದುದು ಎಂಬ ಪ್ರಶ್ನೆಗೆ ಉತ್ತರ ಕೊಡುವುದು ಸ್ವಲ್ಪ ಕಷ್ಟವೇ! ಪೂರ್ವಸೂರಿಗಳ ಮೇಲೆ ಕೃತಿ ಸಂಪಾದಿಸಿದ್ದುದು ನನಗೆ ತುಂಬಾ ತೃಪ್ತಿ ನೀಡಿದೆ. ಆ ಪ್ರಕ್ರಿಯೆಯಲ್ಲಿ ನಾನು ಅನೇಕ ಅಮೆರಿಕನ್ನಡ ಬರಹಗಾರರ ಸಂಪರ್ಕ ಬೆಳೆಸಿ, ತುಂಬಾ ಲಾಭ ಪಡೆದಿರುತ್ತೇನೆ. ಜೊತೆಗೆ, ಬೇರೆ ಹವ್ಯಾಸೀ ಬರಹಗಾರರಿಗೆ ಪ್ರೋತ್ಸಾಹ ನೀಡಿದ್ದೆನೆಂಬ ತೃಪ್ತಿಯೂ ನನ್ನದಾಗಿದೆ. ಇದನ್ನು ಹೆಗ್ಗಳಿಕೆಯ ಮಾತೆಂದು ತಿಳಿಯಬಾರದು. ಅಲ್ಲದೆ, ಸಂಪಾದಕನಾಗಿ ಕರ್ನಾಟಕದ ಹಲವು ಜನಪ್ರಿಯ ಲೇಖಕರ ಸಂಪರ್ಕ ಬೆಳೆಸಿಕೊಳ್ಳುವ ಭಾಗ್ಯವೂ ನನ್ನದಾಗಿದೆ. "ಕಾರಂತ ಚಿಂತನ" ಕೃತಿ ರಚಿಸುವಾಗ ಅಲ್ಲಿನ ಎಲ್ಲ ಲೇಖನಗಳೂ ಅಮೆರಿಕನ್ನಡಿಗರದ್ದೇ ಆಗಿವೆ. ಆದರೆ, ಇತರ ಕೃತಿಗಳಲ್ಲಿ ಕರ್ನಾಟಕದ ಲೇಖಕರಿಂದಲೂ ಲೇಖನ ಪಡೆದಿದ್ದೇನೆ.




ಇನ್ನು ಸ್ವಂತ ಬರವಣಿಗೆಯೂ ನನಗೆ ಬಹಳಷ್ಟು ತೃಪ್ತಿ ನೀಡಿದೆ. ಇತ್ತೀಚೆಗೆ ನನ್ನ ಹುಟ್ಟೂರು ಕೋಟದಲ್ಲಿ "ಅಮೆರಿಕದಲ್ಲಿ ಕಂಡ ಕನಸು, ಕಟ್ಟಿದ ನೆನಪು" ಎಂಬ ಕೃತಿ ಬಿಡುಗಡೆಯಾಗಿದ್ದುದೂ ಎಲ್ಲಿಲ್ಲದೆ ಆನಂದ ನೀಡಿದೆ. ಬರವಣಿಗೆಯಲ್ಲಿ ನಾನು ಅನೇಕರ ಸಹಾಯ ಪಡೆದುದನ್ನು ಇಲ್ಲಿ ಧನ್ಯತಾ ಭಾವನೆಯಿಂದ ನೆನೆಯುತ್ತಿದ್ದೇನೆ. ನನ್ನ ಹೆಚ್ಚಿನ ಕೃತಿಗಳ ಪ್ರಕಾಶಕರಾಗಿ ಬೆಂಗಳೂರಿನ 'ಅಭಿನವ'ದ ರವಿಕುಮಾರರ ಸಹಕಾರವನ್ನು ಮರೆಯುವಂತಿಲ್ಲ. ಹಾಗೆಯೇ, ನಳಿನಿ ಮೈಯ, ರಾಜಗೋಪಾಲ್, ನಟರಾಜ ಮತ್ತಿತರ ಸಹಕಾರವನ್ನೂ ನೆನೆಯುತ್ತಿದ್ದೇನೆ. ಬರವಣಿಗೆ ನನಗೆ ಹಲವಾರು ಬರಹಗಾರರ ಸಂಪರ್ಕ ಬೆಳೆಸಲು ಸಹಾಯವಾಗಿದೆ. ಹೇಳೀಕೇಳಿ ನಾನೊಬ್ಬ ವೈಜ್ಞಾನಿಕ ಸಂಶೋಧನಾ ವಿದ್ಯಾರ್ಥಿ. ಆದರೆ, ಸುಮಾರು ೧೯೯೯ರಿಂದ ನನ್ನಲ್ಲಿ ಬರವಣಿಗೆಯ ಮೇಲಿನ ಆಸಕ್ತಿ ಅದು ಹೇಗೋ ಹುಟ್ಟಿ, ಬೆಳೆದು ಬಂದಿದೆ. ಈ ಮಾರ್ಪಾಟಿಗಾಗಿ ನನಗೆ ಯಾವ ರಿಗ್ರೆಟ್ಸೂ ಇಲ್ಲ! ಬದಲಿಗೆ, ಸಂಪಾದಕನಾಗಿಯೂ, ಸ್ವಂತ ಕೃತಿಕಾರನಾಗಿಯೂ ಅತೀವ ಸಮಾಧಾನ ಪಡೆದಿರುತ್ತೇನೆ. ಸಾಧ್ಯವಾಗುವವರೆಗೂ ನಾನು ನನ್ನ ಬರವಣಿಗೆಯನ್ನು ಮುಂದುವರಿಸಿಕೊಂಡು ಬರುವ ಮಹದಾಸೆ ಇಟ್ಟುಕೊಂಡಿರುತ್ತೇನೆ.

**೫. ಯು.ಆರ್.ಅನಂತಮೂರ್ತಿ ಮತ್ತು ಜಿ.ಎಸ್.ಎಸ್ ಅವರ ಜೊತೆಗೆ ನಿಮ್ಮದು ಬಹುಕಾಲದ ಆತ್ಮೀಯ ಸ್ನೇಹವಾಗಿತ್ತು. ಅವರೊಡನೆ ನಿಮ್ಮ ಒಡನಾಟ ಹೇಗಿತ್ತು ಅಂತ ನಮ್ಮೊಡನೆ ದಯವಿಟ್ಟು ಹಂಚಿಕೊಳ್ಳುತ್ತೀರಾ?**

ನನ್ನ ಬರವಣಿಗೆಯ ಬೆಳವಣಿಗೆಯಲ್ಲಿ ನನಗೆ ಕರ್ನಾಟಕದ ಹಲವು ಸಾಹಿತಿಗಳ ಬೆಂಬಲ ಮತ್ತು ಆತ್ಮೀಯ ಸಂಬಂಧದ ಸುಖ ತೃಪ್ತಿ ಸಿಕ್ಕಿದೆ. ಅವರಲ್ಲಿ ಅನಂತಮೂರ್ತಿ ಮತ್ತು ಶಿವರುದ್ರಪ್ಪನವರ ಹೆಸರುಗಳು ನನ್ನ ಮನಸ್ಸಿನಲ್ಲಿ ಥಟ್ಟನೆ ಮೂಡಿಬರುತ್ತದೆ.

ಅನಂತಮೂರ್ತಿಯವರೊಡನೆ ಆತ್ಮೀಯತೆ ಬೆಳೆದುದು ಕಳೆದ ೮೦ರ ದಶಕದ ಮಧ್ಯೆದಲ್ಲೆಂಬ ನೆನಪು. ಆಗ ಅವರು ಅಯೋವಾ ಯುನಿವರ್ಸಿಟಿಯಲ್ಲಿ ವಿಸಿಟಿಂಗ್ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಶಿಕಾಗೋ ಯುನಿವರ್ಸಿಟಿಯ ಎ.ಕೆ.ರಾಮಾನುಜನ್ ಅವರನ್ನು ಭಾಷಣಕ್ಕೆಂದು ತಮ್ಮಲ್ಲಿಗೆ ಆಗಾಗ್ಗೆ ಬರಮಾಡಿಕೊಳ್ಳುತ್ತಿದ್ದರು. ಒಮ್ಮೆ ಹಾಗೆ ಬಂದಾಗ, ಇಂಟರ್‌ನ್ಯಾಷನಲ್ ಹೌಸ್‌ನಲ್ಲಿ ತಂಗಿದ ಅವರನ್ನು ಪ್ರಥಮ ಬಾರಿಗೆ ಭೇಟಿ ಮಾಡಿ ನನ್ನ-ಅವರ ಮಲೆನಾಡಿನ ಕನೆಕ್ಷನ್ ಹೇಳಿಕೊಂಡು ಅವರನ್ನು ನಮ್ಮ ಮನೆಗೆ ಕರೆದು ತಂದೆ. ಮಲೆನಾಡಿನವಳಾದ ನನ್ನವಳ ಆತಿಥ್ಯವನ್ನು ಅವರು ಬಲುವಾಗಿ ಮೆಚ್ಚಿದರು. ಆಮೇಲಿಂದ, ಅವರು ಶಿಕಾಗೋಗೆ ಬಂದಾಗಲೆಲ್ಲ ನಮ್ಮ ಆತಿಥ್ಯವನ್ನೇ ಸ್ವೀಕರಿಸುತ್ತಿದ್ದರು. ಅವರು ಬಂದಾಗಲೆಲ್ಲ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಸಂವಾದ ನಡೆಸುತ್ತಿದ್ದೆವು. ನಾವು ಬೆಂಗಳೂರಿಗೆ ಹೋದಾಗಲೆಲ್ಲ ಅವರನ್ನು ಭೇಟಿ ಮಾಡಿಯೇ ಬರುತ್ತಿದ್ದೆವು. ಆದರೆ, ೨೦೧೩ರಲ್ಲಿ ಭಾರತ ಭೇಟಿ ಮಾಡಿದಾಗ ಕಾರಣಾಂತರ ಅವರನ್ನು ನೋಡಲಾಗಲಿಲ್ಲ. ಇದು ನಮಗೆ ಇಂದಿಗೂ ಸಂಕಟ ತರುತ್ತಿದೆ. ಕಾರಣ, ಭೌತಿಕವಾಗಿ ಭೇಟಿ ಮಾಡದಂತೆ ವಿಧಿ ಅವರ ನಿಧನದೊಂದಿಗೆ ಅವರನ್ನು ನಮ್ಮಿಂದ ಕಿತ್ತುಕೊಂಡಿತು. **(ಮುಂದಿನ ಪುಟಕ್ಕೆ )**


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ? ಹೀಗೊಂದು ಪ್ರಶ್ನೆ. . . .

ಈ ಕೆಳಗಿನ ಛಾಯಾಚಿತ್ರಗಳಿಗೆ ಒಂದು ಸಾಲಿನ **'ತಲೆಬರಹ '** ಬರೆದು ಕಳಿಸಿ.

ನಮ್ಮ ಮಿಂಚಂಚೆ ವಿಳಾಸ : vani@brindavana.org

ಆಯ್ದ ತಲೆಬರಹಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

**“ .................. “ ?**




**“................” ?**




**ಛಾಯಾಚಿತ್ರ ಕೃಪೆ : ಶಿವಶಂಕರ ಬಣಗಾರ ( ಹೊಸಪೇಟೆ ,ಕರ್ನಾಟಕ)**

## 'ವ್ಯಕ್ತಿ ಪರಿಚಯ' ಮುಂದುವರೆದುದು.. . . . .

೨೦೦೯ ರಲ್ಲಿ ನಾನು ಅವರ ಮೇಲೆ ಒಂದು ಗ್ರಂಥವನ್ನು ಸಂಪಾದಿಸಿದುದು ನನಗೆ ಅತೀವ ತೃಪ್ತಿ ತಂದಿದೆ. ರಾಜರತ್ನಂ ಮೇಲಿನ ನನ್ನ ಸಂಪಾದಿತ ಗ್ರಂಥಕ್ಕೆ ಮುನ್ನುಡಿ ಬರೆಯಲು ಕೇಳಿಕೊಂಡಾಗ, ಅನಾರೋಗ್ಯದಿಂದಾಗಿ ಬರೆಯಲಾಗದಿದ್ದರೂ ಈ ಕೆಳಗಿನ ಮಾತನ್ನು ಬರೆದು ಕಳುಹಿಸಿದ್ದರು: "....ಈಗ ಐತಾಳರು ದೇಹದಲ್ಲಿ ದಣಿದಿದ್ದರೂ ಅಮೆರಿಕದಲ್ಲಿ ಕನ್ನಡಕ್ಕೊಂದು ಮನೆ ಕಟ್ಟುತ್ತಿದ್ದಾರೆ. ಇಂಥವರ ಪ್ರಯತ್ನದಿಂದಲೇ ಶಾಸ್ತ್ರೀಯ ಭಾಷೆ ಜೀವಂತ ಭಾಷೆಯಾಗಿಯೂ 'ಕವಿರಾಜ ಮಾರ್ಗ' ಹಾಕಿದ ಗಡಿಯನ್ನು ಮೀರಿರುವುದು...." ಒಬ್ಬ ಶ್ರೇಷ್ಠ ಸಾಹಿತಿ, ವಿಮರ್ಶಕ, ಚಿಂತಕನಿಂದ ಈ ಮಾತು ಬಂದುದು ನನ್ನ ಭಾಗ್ಯವೆಂದೇ ಭಾವಿಸುತ್ತೇನೆ. ನಾನು ಸಂಪಾದಿಸಿದ ಮೊಟ್ಟ ಮೊದಲನೆಯ ಗ್ರಂಥ, "ಕಾರಂತ ಚಿಂತನ - ಕಡಲಾಚೆಯ ಕನ್ನಡಿಗರಿಂದ" ಅವರ ಪ್ರೋತ್ಸಾಹದಿಂದಲೇ ಪ್ರಕಟವಾಗಲು ಸಾಧ್ಯವಾಯ್ತು. ಅವರು ಶಿಕಾಗೋಗೆ ಬಂದಾಗ, ಕಾರಂತರ ಮೇಲೊಂದು ಗ್ರಂಥ ತಯಾರಿಸುವುದಕ್ಕೆ ಸಲಹೆ ಕೊಟ್ಟು, ಆ ಕೆಲಸವನ್ನು ನನ್ನಿಂದ ಮಾಡಿಸಿದರು. ಆ ಬಗ್ಗೆ ನಾನವರಿಗೆ ಕೃತಜ್ಞ!! ಮುಂದೆ, ಬೇರೆ ಗ್ರಂಥ ಪ್ರಕಟಿಸುವಲ್ಲಿ ಅವರ ಪ್ರೋತ್ಸಾಹ ನನಗೆ ಎಲ್ಲಿಲ್ಲದ ಉತ್ತೇಜನ ಕೊಟ್ಟಿತು ಎಂಬುದನ್ನು ಧನ್ಯತಾಭಾವನೆಯಿಂದ ಸ್ಮರಿಸುತ್ತೇನೆ. ರಾಜಕೀಯದಲ್ಲಿ, ಸೆಕ್ಯುಲರಿಸಂ ಮೇಲಿನ ಅವರ ನಿಲುವು ಏನೇ ಇರಲಿ, ಅವರೊಬ್ಬ ಅಪ್ಪಟ ಕನ್ನಡಪ್ರೇಮಿ, ಪ್ರತಿಭಾವಂತ ಚಿಂತಕ, ಉತ್ತಮ ಸಾಹಿತಿ ಎಂಬುದರಲ್ಲಿ ಅನುಮಾನವೇ ಇಲ್ಲ! ಅವರ ಒಂದು ಗಮನಾರ್ಹ ಗುಣವೆಂದರೆ, ಅವರು ವೈಚಾರಿಕತೆಗೆ ಕೊಡುವ ಮಹತ್ವ. ಅಂಥವರ ಆತ್ಮೀಯ ಸ್ನೇಹ ನನಗೆ ದೊರಕಿದುದು ನನ್ನ ಅದೃಷ್ಟವೆಂದೇ ತಿಳಿದಿರುತ್ತೇನೆ.

ಹಾಗೆಯೇ ಶಿವರುದ್ರಪ್ಪನವರ ಸಂಪರ್ಕವೂ ನನ್ನ ಪಾಲಿನ ಭಾಗ್ಯವಾಗಿತ್ತು. ಅವರು ಅಮೆರಿಕಕಕ್ಕೆ ಬಂದಾಗಲೆಲ್ಲ ನಮ್ಮ ಆತಿಥ್ಯ ಪಡೆಯದೆ ಹೋಗುತ್ತಿರಲಿಲ್ಲ. ನಾನೂ ಕೂಡ ಬೆಂಗಳೂರಿಗೆ ಭೇಟಿ ಕೊಟ್ಟಾಗಲೆಲ್ಲ ಅವರನ್ನು ಭೇಟಿಯಾಗುತ್ತಿದ್ದೆ. ಬಂದಾಗಲೆಲ್ಲ ನಾನೂ, ನನ್ನವಳೂ ನಮ್ಮ ಕಿಚನ್ ಟೇಬಲ್ ಮುಂದೆ ನಡೆಸಿದ ಸಾಹಿತ್ಯ ಸಂವಾದ ನನಗೆ ಅತ್ಯಂತ ಆತ್ಮೀಯವಾದುದು. ಅದು ನನಗೆ ಅವರ ಸಾಹಿತ್ಯದ ಆಳ ಜ್ಞಾನದ ಅರಿವಾದುದಲ್ಲದೆ, ನನ್ನ ಸಾಹಿತ್ಯಾಸಕ್ತಿಯನ್ನೂ ಕೆರಳಿಸಲು ಕಾರಣವಾಯ್ತು. ಅಂಥ ಒಂದು ಸಂವಾದವನ್ನು ನನ್ನ ಇತ್ತೀಚಿನ "ಸಾಹಿತ್ಯ ಸ್ಪಂದನ"ದಲ್ಲಿನ ಲೇಖನವೊಂದರಲ್ಲಿ ದಾಖಲೀಕರಿಸಿದ್ದೇನೆ. ಅವರು ತೀರಿಕೊಳ್ಳುವ ಮೊದಲು ಬಹುಕಾಲ ಪ್ರಜ್ಞೆ ತಪ್ಪಿದ್ದರು. ಆ ಸ್ಥಿತಿಯಲ್ಲಿ ಅವರನ್ನು ಕಾಣುವ ದೌರ್ಭಾಗ್ಯ ನನ್ನದಾಗಿತ್ತು. ತಮ್ಮ ಕವನವೊಂದರಲ್ಲಿ ಹೇಳಿದ "ದತ್ತವಾಗಿದೆ ಮತ್ತೆ ವ್ಯಕ್ತ ಮಧ್ಯದ ಬದುಕು; ಮೊದಲಿಗಿಂತಲೂ ಸೊಗಸಾಗಿ ಕಂಡಿತು ಲೋಕ; ಈವರೆಗೂ ಮಹಾ ವಿಸ್ಮೃತಿಯಲ್ಲಿ ಕರಗಿ ಹೋಗಿ ಬಂದ ಅಸ್ತಿತ್ವಕ್ಕೆ ಎಲ್ಲವನೂ ತಬ್ಬಿಕೊಳ್ಳುವ ತವಕ" ಎಂಬ ಮಾತಿನ ಅರ್ಥವನ್ನು ಅರಿಯುವ ಸ್ಥಿತಿ ನನ್ನದಾಗಿತ್ತು ಅವರ ಆ ಸ್ಥಿತಿಯನ್ನು ನೋಡಿದಾಗ. ಅವರನ್ನು ನೆನೆಸಿದಾಗಲೆಲ್ಲ ನನ್ನ 'ಎದೆತುಂಬಿ'ಬರುವುದು. ಭೌತಿಕವಾಗಿ ಈಗ ಅವರು ನಮ್ಮೆದುರು ಇಲ್ಲದಿದ್ದರೂ, ನಮ್ಮ ಸ್ಮರಣೆಯಲ್ಲಂತೂ ಅವರು ಸದಾ ಉಳಿವುವುದಂತೂ ನಿಜ!! ಇದೇ ನಮ್ಮೆಲ್ಲರಿಗೂ, ಸಾಹಿತ್ಯಲೋಕಕ್ಕೂ ಅವರು ಬಿಟ್ಟುಹೋದ ಬಳುವಳಿ!! ಅವರ "ಪ್ರೀತಿ ಇಲ್ಲದ ಮೇಲೆ ಹೂವು ಅರಳಿತು ಹೇಗೆ?" ಎಂಬ ಸಂದೇಶದದ ತಿರುಳು ನಮ್ಮ ಮನಸ್ಸಿನಲ್ಲಿ ಮಥಿಸುತ್ತಿರುವುದಂತೂ ನಿಜ!!! ಅವರು ನನ್ನ ಮೇಲಿಟ್ಟ ಪ್ರೀತಿ, ವಿಶ್ವಾಸವನ್ನು ನೆನೆದಾಗಲೆಲ್ಲ ನನ್ನ ಹೃದಯ ಕೃತಜ್ಞತೆಯಿಂದ ತುಂಬಿ ತುಳುಕಾಡುತ್ತಿರುತ್ತದೆ! ಅಂತಹ ಮಹಾಚೇತನಕ್ಕೆ ನಮ್ರ ನಮನ!!!


Copyright © KCO – Brindavana

ಸಂಚಿಕೆ
೦೩
ಮಾರ್ಚ್ ೨೦೦೬



## ಕನ್ನಡ ಬಳಗದ ಸಾಹಿತ್ಯಾಭಿರುಚಿ

### ಸಾಹಿತ್ಯ ಬೃಂದಾವದಲ್ಲಿ ಮೆಚ್ಚುಗೆ ಪಡೆದ ಅನುವಾದಿತ ಕವನಗಳು

ಮೂಲ ಕವನ: Midnight Lamentation by Harold Monro. ಮೂಲ ಕವನ ನೋಡಲು ಇಲ್ಲಿ ಕ್ಲಿಕ್ಕಿಸಿ

**ನಟ್ಟಿರುಳ ಚರಮಗೀತೆ**

ನಶಿಸಿದಾಗ ನೀನು ನಾನು
ಉಸಿರು ಕಟ್ಟಿ ಮರುಗಟ್ಟಿ ತನು
ಸೇರುವುದು ನಮ್ಮ ಶುಷ್ಕ ಮುಖ
ಕಾದ ಬುವಿಯ ಮಣ್ಣಚ್ಚಿನಲಿ ಏಕ
ಕೊನೆಯಿಲ್ಲದ ಏಕಾಂತದಲಿ
ಹೇಗೆ ಬಾಳುವೆವೋ ಕಾಣೆ
ನಾನಿಲ್ಲದ ನೀನು,
ನೀನಿಲ್ಲದ ನಾನು. (೧)

ಕಲ್ಪಿಸಲೂ ಸಾಧ್ಯವಿಲ್ಲ ಎನಗೆ
ಮೊದಲು ತೆರಳುವಿ ನೀನೆಂದು
ನಿನ್ನಳು ಮೊಗವನ್ನೂ ಕಾಣಲಾರೆ
ಸತ್ತರೆ ನಾ ಅಂದು
ಅದೆಷ್ಟು ಹಚ್ಚಿಕೊಂಡುಬಿಟ್ಟಿದ್ದೇವೆ
ಏನು ತಾನೆ ಮಾಡಿಯೇವು
ಈ ಎರಡು ಜೀವಗಳ ಒಂದುಗೂಡಿಸಲು
ನನಗೆ ನೀನು ನಿನಗೆ ನಾನು? (೨)

ನಾವಿಬ್ಬರೂ ಕಣ್ತೆರೆದದ್ದು
ಒಂದೇ ದಡವ ಸೇರಲಲ್ಲವೇ
ಆ ಉದ್ಗಾರ ಹರ್ಷಮಯ
ನಿಜವ ಬಗೆವ ದಿವ್ಯ
ಹಾಗಿದ್ದರೆ ನಾವು ಅಗಲದೇ
ದಾರಿಯಿಲ್ಲವೆ ಬೇರೆ
ಹೃದಯ ಬಡಿತ ತಪ್ಪದಿರಲು ತಾಳ
ಬೆಳಕು ಬಯಕೆಯ ಆಳ. (೩)

ಓಡಬಲ್ಲೆ ಎದ್ದು ನಾನೀಗಲೇ
ಬೀದಿಯಿಂದ ವೀಧಿಗೆ
ನಿನ್ನುಸಿರಶಾಖದ ತಾವಿನಲಿ
ಭೇಟಿಯಾಗ್ವ ದರ್ದಿಗೆ
ಆ ಜೀವಂತ ದನಿಯ ಕೇಳಲು
ಎಲ್ಲ ಬೇಲಿಗಳ ಹಾರಿ ಧ್ವನಿಸುತ
ಭಯ ಮೀರಿದಾನಂದ ನಮಗೆ
ನಲುಮೆ ನೇಹದ ಗಡಿಯ ಒಳಗೆ.(೪)

ಅದೆಷ್ಟು ನಾಜೂಕಿನ ಜೀವ ನಮ್ಮದು
ನಮ್ಮ ಸೃಷ್ಟಿಯ ಕಾರಣವೇ
ನಶಿಸಿ ತೆರಳಲು ಕೃಶವಾಗಿ
ಒರಗಿ ಮರೆಯಾಗಲು ಎಂದರೆ
ಯೋಚಿಸುವೆ ನಾನೂ ಯಮನ ಕುರಿತು
ನಿತ್ಯವೂ ಇಲ್ಲೇನೋ ಮಂಕು ಕವಿದಂತೆ
ನನ್ನ ನಿನ್ನ ಉಸಿರು ಬೆರೆತು
ಕೋಣೆಯಲಿ ನಿಶಬ್ದ ಸುರಿದಂತೆ.(೫)

ಅದೆಷ್ಟು ಆಕಸ್ಮಿಕ ಅಲ್ಲವೇ
ಇಬ್ಬರಲ್ಲೊಬ್ಬರು ಕುಸಿವುದೆಂದರೆ
ಮೋರೆ ಕೂಡ ಏಸು ಕಾಂತಿಹೀನ
ಆ ಹೊತ್ತು ಜೀವ ಸರಿವಾಗ
ಅಲ್ಲೆಲ್ಲೋ ದೂರದ ಊರಿನಲಿ
ಎಲ್ಲ ಹೂಗಳ ಘಮ ಮಾಸಿ
ಜೀವವಿರದ ಮೊಗದ ಮೇಲೆ
ಪಥನಗೊಂಡ ಕಣ್ಣೀರ ಹನಿ.(೬)

ಯಾವುದು ಸುರಕ್ಷಿತ ಈ ಲೋಕದಲಿ
ನಾವು ಹುಡುಕಲಾರದ ಕಕ್ಷೆಯಲಿ
ಎಂದೂ ಮುಗಿಯದ ಪಯಣವಿದು
ನಮ್ಮದೇ ಸ್ವಂತ ಚಿತ್ತದಲಿ
ಕಳಂಕದಂತೆ ತೋರುವುದು ನನಗದು
ಅರ್ಥೈಸಿಕೊಂಡು ನಿನ್ನದೊಂದು ಶಬ್ದ
ನಿನ್ನ ಹುರುಪ ಅಳೆಯುವೆ ಕಿರುಬೆರಳ
ಹಿಡಿದು ನಿನ್ನರಿವ ಹಾಯುವೆ.(೭)

ಕಾಣಲಾರೆ ನಾನು ಹಾದಿ
ಪ್ರೇಮ ಮಾರ್ಗದ ತೆರದಿ
ಮೀರಿ ಮುಟ್ಟಲಾರೆ ನಿನ್ನನು
ಈ ದೇಹ ಕಟ್ಟಿರುವ ಮಣ್ಣನು
ಹೊರಡಲನುವಾದಾಗ ನೀನು ನಾನು
ಈ ಪರದೆ ಸರಿಸದೇ ಮಾಣು
ಈ ತುದಿಯಲಿ ಬೇರೇನು ಉಳಿದೀತು
ಮುಚ್ಚಿದ ಬಾಗಿಲ ಹೊರತು.(೮)

**-ಕಾವ್ಯಾ ಕಡಮೆ ನಾಗರಕಟ್ಟೆ**

**ನಿಶಾ ವಿಲಾಪ**

ಬಾಳ ಬಾನಿನಿಂದ ರವಿಯು
ಮರೆಯಾಗುವಾಗ,
ಶೈತ್ಯ ಸಾಗರದಲೆಯು
ಮೈಯನಾವರಿಸಿದಾಗ,
ಮುಖಗಳೆರಡೂ ಇಹದ ಅಚ್ಚು
ಧರಿಸಿ ನಿಂತಾಗ,
ಕಾಡದಿರದೇ ಒಂಟಿತನವು
ನೀನಿಲ್ಲದ ನನಗೆ, ನಾನಿಲ್ಲದ ನಿನಗೆ?(೧)

ಅಗಲಿಕೆಯ ಯೋಚನೆಯ
ಹೇಗೆ ಸಹಿಸಲಿ?
ಅಕ್ಷಿಯೊಳು ಅಶ್ರುಗಳ
ನಾ ಹೇಗೆ ನೆನೆಯಲಿ?
ಏಕಾಂಗಿಗಳು ನಾವು
ನಾನೇನು ಮಾಡಲಿ?
ಜೊತೆಯಿರಲು ಎಂದೆಂದೂ
ಜನುಮ ಜನುಮದಲಿ.(೨)

ಜನನದಲಿ ಸಮವಾಗಿ,
ಸಂತಸದಿ ಜೊತೆಯಾಗಿ,
ಅಂತರಂಗದಿ ಇಹೆವು
ಸಮ ಮನಸ್ಕರಾಗಿ.
ದೂರಾಗಲೇ ಬೇಕು ಕಾಲ ಬಂದಾಗ.
ಪರ್ಯಾಯ ಪಥವಿಹುದೇ
ಎದೆ ದನಿಯ ಉಳಿಸಿಡಲು,
ಹೊಂಬಿಸಿಲ ಸವಿಯುಣಲು?(೩)

ಉದಯಿಸುವೆ, ಪಸರಿಸುವೆ
ಹಾದಿ ಬೀದಿಗಳೊಳಗೆ,
ನಿನ್ನ ಉಸಿರಾಟದ ಕಡೆಗೆ,
ನಿನ್ನೊಲುಮೆಯೆಡೆಗೆ.
ಭೇಟಿಯಾಗುವ ಬಯಕೆ
ನಿಜವಾಗಬಹುದು,
ಜೀವಧ್ವನಿ ಭಯವ
ಹೊರಮಾಡಬಹುದು,
ಪ್ರೇಮದಲೆಯಲಿ ನಾವು(೪)

ದೇಹವಿರುವುದೇ ಹೀಗೆ
ಬಲಹೀನವಾಗಿ,
ಮಣ್ಣಾಗುವಾಗ ಬಲು
ಕಳಾಹೀನವಾಗಿ.
ಸುತ್ತೆಲ್ಲಾ ಕತ್ತಲೆ ನಿನ್ನುಸಿರ ಸ್ವರವಿರದೆ,
ಮಂದ ಮಾರುತವೊಂದು
ಮೆಲ್ಲನಾವರಿಸಿದೆ,
ಅಂತ್ಯ ಕ್ಷಣಗಳ ಬಗ್ಗೆ
ಬಹಳ ಚಿಂತಿಸುವೆ.(೫)

ಬಾಳ ನೌಕೆಯು ಕಡಲ
ತಳ ಸೇರಿಕೊಳಲು,
ಮುಖ ಚಹರೆ ಬಿಳುಪಾಗಿ
ಒಡಲು ಬಾಗಿರಲು,
ಬಣ್ಣಹೀನ ಮೊಗದೊಳು
ಬಾಡಿದ ಹೂಗಳು
ನಾಟ್ಯವಾಡುವ ಘಳಿಗೆ
ಬಂದೇ ಬರಬಹುದು.(೬)


ಎಣಿಕೆಯೊಳು ಜೀವನವ
ಅಮರವಾಗಿಸಬಹುದೆ?
ಪ್ರಾಣ ಪಕ್ಷಿಗಳಿಗೆ ರಕ್ಷಣೆಯ
ಸುಖವಿಹುದೆ?
ಅಂತರಂಗವ ಅರಿವ ವಿಧಿಯನ್ನು ತಿಳಿಸು,
ಸ್ಪರ್ಷ, ವಚನಗಳಿಲದೆ
ಆತ್ಮಗಳ ಬೆರೆಸು.(೭)

ಪ್ರೇಮದ ದಾರಿಯು
ನಿನ್ನೂರ ತಲುಪದು,
ದೇಹಗಳ ಹೊರತಾಗಿ
ಜೊತೆಯಿರಲು ನೆಲೆಯಿರದು.
ಒಡಗೂಡಿ ಮುನ್ನಡೆಯುವ
ಸಮಯ ಬರುವಾಗ,
ಕದಗಳನು ತೆರೆಯಲು
ಕೀಲಿ ಕೈಯೇ ಇರದು.(೮)

**-ಕೇಶವ ಪ್ರಶಾಂತ್**


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ಭಕ್ತ್ಯೈಕ ವಶ್ಯೋ ಹರಿಃ

**ಜ್ಞಾನವಿಲ್ಲದ ಭಕ್ತಿ ಅದು ಭಕ್ತಿಯಲ್ಲ, ಬರಿಯ ಮೌಢ್ಯ. ಅಲ್ಲಿ ಗುರಿಯಿರುವುದಿಲ್ಲ , ಭಯವಿರುತ್ತದೆ. ಸ್ಪಷ್ಟತೆಯಿರುವುದಿಲ್ಲ, ಗೊಂದಲವಿರುತ್ತದೆ......**

ಏನನ್ನಾದರೂ ಸಾಧಿಸಬೇಕು ,ಯಾವುದಾದರೂ ಒಂದು ಗುರಿಯನ್ನು ತಲುಪಬೇಕು ಎಂಬುವುದು ಎಲ್ಲರ ಬದುಕಿನ ಒಂದು ಹಂಬಲ. ಹೀಗೆ ಸಾಮಾನ್ಯವಾಗಿ ಯಾವುದೋ ನಿರ್ದಿಷ್ಟ ಗುರಿಯೊಂದಿಗೆ ಪ್ರತಿಯೊಬ್ಬನ ಜೀವನ ಯಾತ್ರೆ ಮೊದಲುಗೊಳ್ಳುತ್ತದೆ.ಆದರೆ ಲೌಕಿಕವಾದ ಗುರಿಗಳನ್ನು ಎಷ್ಟು ಏರಿದರೂ ಅಲ್ಲಿ ತೃಪ್ತಿ ಎಂಬುದು ಸಿಗದು. ಮೊದಮೊದಲು ಇದ್ದ ನಿರೀಕ್ಷೆ , ಉತ್ಸಾಹ ಅದರ ಬಳಿಸಾರಿದಾಗ ಇಳಿಮುಖವಾಗಿರುತ್ತದೆ. ಅದು ಇಷ್ಟೇ ಅನ್ನುವ ಅದರ ಇತಿಮಿತಿಯನ್ನು ಕಂಡಾಗ ಭ್ರಮ ನಿರಸನವಾಗುತ್ತದೆ. ಮತ್ತೆ ಮುಖ ಇನ್ನೊಂದರೆಡೆಗೆ. ಅಲ್ಲಿಯೂ ಇಂತಹದ್ದೆ ಅನುಭವವಾದಾಗ ಮತ್ತೆ ಇನ್ನೊಂದರ ಬೇಟೆ.

ಹೀಗೆ ಲೌಕಿಕವಾದ ಯಾವ ವಸ್ತುವಿನಲ್ಲಿ ಕೂಡ ಪೂರ್ಣ ತೃಪ್ತಿ ಎನ್ನುವುದು ಸಿಗಲು ಸಾಧ್ಯವಿಲ್ಲ.ಇಂತಹ ಬದುಕಿನಲ್ಲಿ ಮತ್ತೆ ಸಾರ್ಥಕತೆಯೇನು ಬಂತು ? ಸಾರ್ಥಕತೆ ಅನ್ನುವುದು ನಮಗೆ ಬೇಕಾಗಿರುವುದು ಸಿಕ್ಕಿದಾಗ, ನಮ್ಮನ್ನು ಸಂಪೂರ್ಣವಾಗಿ ತೃಪ್ತರನ್ನಾಗಿಸಿದಾಗ ಮಾತ್ರ ತಾನೇ ಬರಲು ಸಾಧ್ಯ ? ಯಾವುದು ದೊರಕಿದಾಗ, ಎಲ್ಲವೂ ದೊರಕಿದಂತೆ ಅನ್ನಿಸುವುದೋ ಮತ್ತು ಯಾವುದನ್ನು ಪಡೆದಾಗ ಇನ್ನು ಏನೂ ಬೇಡ ಅನ್ನಿಸುವುದೋ ಅದುವೇ ನಮ್ಮ ನಿಜವಾದ ಸಾರ್ಥಕವಾದ ಸಂಪಾದನೆ.

ಜಗತ್ತಿನಲ್ಲಿ ಅಂತಹದೊಂದಿದ್ದರೆ ಅದು ಭಗವಂತನ ಅನುಗ್ರಹ ಮಾತ್ರ.ಹಾಗೆಂದು ಸಾಧಿಸಿ ತೋರಿಸುತ್ತವೆ ನಮ್ಮ ಪುರಾಣ ಇತಿಹಾಸಗಳು ಮತ್ತು ನಮ್ಮ ಭವ್ಯ ಪರಂಪರೆಯಲ್ಲಿ ಮೆರೆದು ಬಂದ ಅನೇಕ ಮಹನೀಯರ ಜೀವನ ಸಂದೇಶಗಳು.ಭಗವಂತ ಒಲಿದರೆ ಜಗತ್ತಿನ ಎಲ್ಲ ಸುಖಗಳೂ ದೊರಕಿದಂತೆಯೇ.ಏಕೆಂದರೆ ಸುಖವನ್ನು ಅರಸಿಕೊಂಡು ನಾವು ಜೀವನಪೂರ್ತಿ ಏನನ್ನೆಲ್ಲಾ ಹೊಂದಲು ಪ್ರಯತ್ನಿಸುತ್ತೇವೆಯೋ ಅವೆಲ್ಲವೂ ಇರುವುದು ಅವನಲ್ಲಿಯೇ.ಮತ್ತು ಶರಣಾಗತರಿಗೆ ಅವನೀಯುವ ಆನಂದ ಏನಿದೆ ಅದು ಎಂದೆಂದಿಗೂ ಇರುವಂತದ್ದು. ಪ್ರಪಂಚದಲ್ಲಿ ಅವನೊಬ್ಬನೇ ಶಾಶ್ವತ ಮತ್ತು ಸಾರ್ವಕಾಲಿಕ.

ಆದ ಕಾರಣ ಬದುಕಿನ ಸಾರ್ಥಕತೆಯಿರುವುದು ಭಗವಂತನನ್ನು ಒಲಿಸಿಕೊಂಡಾಗ ಮಾತ್ರ. ಅವನನ್ನು ಒಲಿಸಿಕೊಳ್ಳುವ ಬಗೆ ಹೇಗೆ? ಅವನ ಅನುಗ್ರಹವನ್ನು ಪಡೆಯುವ ಉಪಾಯಗಳೇನು ? ಎಂಬ ಕುತೂಹಲಕ್ಕೆ ಪುರಾಣೋಪನಿಷತ್ತುಗಳಿಂದ ಸ್ಪಷ್ಟವಾಗಿ ಸಮುದ್ದಿಷ್ಟವಾದ ದಾರಿಯೆಂದರೆ, ಅದು ಭಕ್ತಿ. ಪರಮಾತ್ಮನನ್ನು ಒಲಿಸಿಕೊಳ್ಳುವ ಸಾಧನಗಳಲ್ಲಿ ಶ್ರೇಷ್ಠವಾದ ಸಾಧನ ಭಕ್ತಿ.

ಭಕ್ತಿಯೆಂದರೆ ಅದು ನಿಷ್ಕಪಟ ಪ್ರೀತಿ. ಬೇರೆಲ್ಲೂ ಇಲ್ಲದ ಗಾಢವಾದ ಪ್ರೀತಿ, ಸ್ನೇಹ. ಪರಮಾತ್ಮನ ಹಿರಿಮೆ, ಮಹಿಮೆ, ಗರಿಮೆಗಳನ್ನರಿತು ನಾವಾತನಿಗೆ ಪೂರ್ಣವಾಗಿ ಶರಣಾಗತರಾಗಿ ಬೇರೇನೂ ಬೇಡವೆನಿಸಿ ಅವನನ್ನೇ ಬಯಸುವುದು, ಅವನನ್ನೇ ಭಜಿಸುವುದು, ಅದು ಭಕ್ತಿ. ಅದರಿಂದ ಮಾತ್ರ ಮುಕ್ತಿ.

**ಮಾಹಾತ್ಮ್ಯ ಜ್ಞಾನಪೂರ್ವಸ್ತು ಸುಧೃಢಃ ಸರ್ವತೋಧಿಕಃ |
ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನಚಾನ್ಯಥಾ ||**

ಭಕ್ತಿಯೆಂದರೆ ಕೇವಲ ಶರಣಾಗತಿಯಲ್ಲ. ಅದು ಜ್ಞಾನಯುಕ್ತವಾಗಿರಬೇಕು. ಸ್ನೇಹವೆನ್ನುವುದು ಬೇರೆಲ್ಲೂ ಇಲ್ಲದಷ್ಟು ಗಾಢವಾಗಬೇಕಾದರೆ ,ದೃಢವಾಗಬೇಕಾದರೆ ಎಲ್ಲಕ್ಕಿಂತಲೂ ಹೆಚ್ಚಿನದ್ದು ಅನ್ನಿಸಬೇಕಾದರೆ ಅದರ ಬಗೆಗಿನ ಔನ್ನತ್ಯದ ಅರಿವು, ಅದು ಸುಸ್ಪಷ್ಟವಾಗಿರಬೇಕು. ನಿಸ್ಸಂಶಯವಾಗಿರಬೇಕು. ಅಲ್ಲಿ ಗೊಂದಲವಿರಬಾರದು. ಅಂತಹ ತತ್ವನಿಶ್ಚಯವಾದರೆ ಮಾತ್ರ ಮಹತ್ವದ ಅರಿವು ಸ್ಪಷ್ಟವಾಗುತ್ತದೆ. ಅಲ್ಲಿ ಅಧಿಕವಾದ ಆಸಕ್ತಿ ಹುಟ್ಟುತ್ತದೆ. ಇಂತಹ ಜ್ಞಾನವನ್ನು ಸಂಪಾದಿಸಬೇಕಾದರೆ ಇರುವ ಒಂದೇ ಒಂದು ದಾರಿ , ಅದು ಶಾಸ್ತ್ರದ ಶ್ರವಣ , ಮನನ ಮತ್ತು ಧ್ಯಾನ.

ಜ್ಞಾನವಿಲ್ಲದ ಭಕ್ತಿ ಅದು ಭಕ್ತಿಯಲ್ಲ, ಬರಿಯ ಮೌಢ್ಯ. ಅಲ್ಲಿ ಗುರಿಯಿರುವುದಿಲ್ಲ ,ಭಯವಿರುತ್ತದೆ. ಸ್ಪಷ್ಟತೆಯಿರುವುದಿಲ್ಲ, ಗೊಂದಲವಿರುತ್ತದೆ.ಇದರಿಂದ ಏನೂ ಉಪಯೋಗವಿಲ್ಲ.ಏನನ್ನೂ ಸಾಧಿಸಲು ಬರುವುದಿಲ್ಲ. ಫಲಿತಾಂಶ - ಶೂನ್ಯಸಂಪಾದನೆ. ನಿಷ್ಕಲ್ಮಷವಾದ ಭಕ್ತಿ ಬೇಕಾದರೆ ನಿರ್ದಿಷ್ಟವಾದ ಜ್ಞಾನ ಬೇಕು. ಅಂತಹ ಜ್ಞಾನ ಸಿಗುವುದು ಶಾಸ್ತ್ರದ ಅಧ್ಯಯನದಿಂದ ಮಾತ್ರ.ಆದ್ದರಿಂದ ಭಗವಂತನು ಭಕ್ತ್ಯೈಕವಶ್ಯನೆಂದು ಶಾಸ್ತ್ರಗಳು ಸಾರಿ ಹೇಳಲು ಮುಖ್ಯ ಕಾರಣ. ■

### ಬಂಡಾಯವೆದ್ದ ಬಳ್ಳಿ

**ಅನುವಾದ - ಸರಿತಾ ನವಲಿ**

**ಮೂಲ ಕವನ -** The-Rebellious-Vine by Harold Monro

ಮೂಲ ಕವನ ನೋಡಲು ಇಲ್ಲಿ ಕ್ಲಿಕ್ಕಿಸಿ

ಕಂಡೆನಾ ಬಂಡಾಯವೆದ್ದ ಬಳ್ಳಿಯೊಂದ ,
ರೋದಿಸಿತದು ತಟ್ಟಿ ಸೃಷ್ಟಿಕರ್ತನ ಮನೆಯ ಕದ |

“ ನಾನಿನ್ನು ಬೆಳೆಯಲಾರೆ”,
“ ನಾನಿನ್ನು ಬೆಳೆಯಲಾರೆ”,
“ ನಾನಿನ್ನು ಬೆಳೆಯಲಾರೆ” .

ಹೊರ ಇಣುಕಿ ನುಡಿದ ಸೃಷ್ಟಿಕರ್ತ ,
“ಒಪ್ಪಿದೆ ನಿನ್ನ ಹಠವ , ನಿಲ್ಲಿಸಿನ್ನು ಆರ್ತ” |

ಪಟಪಟಿಸಿ ಪರ್ಣಗಳ, ಸುರಿಸುರಿಸಿ ಅಶ್ರುಗಳ,
ಪ್ರಶ್ನಿಸಿತು ಬಳ್ಳಿ ಮಲಯ ಮಾರುತಗಳ |

“ನನಗಿಲ್ಲವೇ ಕರ್ತಾರನ ಅನುಮತಿ,
ವಿರಮಿಸಲು ಚಿಗುರೊಡೆವ ಗತಿ ?”

ಜಾಣನವ ಈ ಜಗದ ಒಡೆಯ ,
ಪರ್ಯಾಲೋಚಿಸಿ ಮಾಡಿದ್ದ ನಿರ್ಣಯ |

ವಿರಮಿಸುವ ಪ್ರಯತ್ನ ಆಯಿತು ವ್ಯರ್ಥ,
ಬೆಳೆಯುತ್ತಾ ಹೋಯಿತದು ನಿರಂತರ ನಿತ್ಯ ,
ಜಗದೊಡೆಯನಿಗೆ ತಿಳಿದಿತ್ತು ಈ ಸತ್ಯ |



### ನಿಮಗೆಷ್ಟು ಗೊತ್ತು ?

**ಜನವರಿ ಸಂಚಿಕೆಯ ರಸ ಪ್ರಶ್ನೆಗಳಿಗೆ ಉತ್ತರಗಳು :**

1. ಆಗುಂಬೆ 2. ಸನ್ಮಾನ್ಯ ಶ್ರೀ ಬಿ.ಡಿ.ಜತ್ತಿ 3. 14 4. ಸರ್ ಎಮ್.ವಿಶ್ವೇಶ್ವರಯ್ಯ 5. ಬೆಂದಕಾಳೂರು
6. ಅಂಬಿಕಾತನಯದತ್ತ 7. ಹಿರೇಕೋಡಿಗೆ 8. ಒನಕೆ ಓಬವ್ವ 9. ಗುರು ವಿದ್ಯಾರಣ್ಯರು 10. ಕುಂದ (ಸಿಹಿ ಖಾದ್ಯ)


Copyright © KCO – Brindavana

ಸಂಚಿಕೆ
೦೩
ಮಾರ್ಚ್ ೨೦೦೬



## ಅತಿಥಿ ಬರಹಗಾರರು



ಡಾ. ಬಿ.ಸಂಜಯ
(ಪ್ರಧಾನ ಗ್ರಂಥಪಾಲಕರು , ಇನ್ಫೋಸಿಸ್ ಬೆಂಗಳೂರು)

### ಸಂವಾದ

ಕಣ್ಣೆವೆಯಿಕ್ಕುವುದರೊಳಗೆ ಚಲನೆ
ಮತ್ತೊಮ್ಮೆ ಆ ಹೂದಾನಿಯಲ್ಲೇ
ಅರೆ! ನಕ್ಕು ಬಿಕ್ಕುತ್ತಿವೆ ಆ ಹೂಗಳು
ಆ ಹೂದಾನಿಯಲ್ಲೇ

ಅರಳಿದಾ ಭಾವನೆಗೆ ಬಣ್ಣ ಬಳಿದಂತೆ
ನಲ್ಲೆಯಾ ಮೆಲ್ಲುಸಿರಿನ ಘಮಘಮದಂತೆ
ತೂಗುತಾ ತೊನೆಯುತಾ ತುಂಟ ತರುಣಿಯಂತೆ
ಬಚ್ಚಿಟ್ಟು ಕೊಟ್ಟ ಬೆಚ್ಚನೆಯ ಮುತ್ತಿನಂತೆ

ಕಲ್ಪನೆಯಾಳಕ್ಕೆಲ್ಲೋ ಕರೆದೊಯ್ದಂತೆ
ಹೃದಯದಾ ಭಾಷೆಗೆ ಬಾಯಿ ಬಂದಂತೆ
ಪ್ರಶ್ನಿಸಿವೆ ಅವೇ ಮತ್ತೆ
ಏ ಹುಡುಗ ಏಕಿಷ್ಟು ಭಾವುಕತೆ?

ಇಂದು ಅರಳಿರುವೆವು ನಾಳೆಯೆಂಬುದು ನಮಗಿಲ್ಲ
ನಿಮ್ಮಯಾ ಪ್ರೀತಿಗೆ ನಾವು ಬಲಿಯಾದೆವಲ್ಲಾ
ಯಾರದೋ ಮುಡಿಗೆ ಜೀವ ಮುಡಿಪಾಗಿಟ್ಟೆವಲ್ಲ
ನಮ್ಮ ಭಾವನೆಗಳಿಗೆ ನಿಮ್ಮಲ್ಲಿ ಬೆಲೆಯೇ ಇಲ್ಲ

ಲಲ್ಲೆ ಮಾತಿನ ನಲ್ಲೆ ಕಣ್ಣೀರು ಕರೆದಂತೆ
ಸೂಸಿದಾ ಕಂಪಿಗೆಲ್ಲೋ ಘಾಟು ಬೆರೆತಂತೆ
ನೆಚ್ಚಿದಾ ಮನದನ್ನೆ ಎದೆ ಚುಚ್ಚಿದಂತೆ
ಮಾತು ಬಾರದೆ ನಿಂತೆ ಅಸಹಾಯಕನಂತೆ

ಮತ್ತೆ ಹೊಯ್ದಾಡಿತು ಮನ ಹೂದಾನಿಯೆಡೆಗೆ
ಸಂಜೆಗೆಂಪಿನಡಿಯಲ್ಲಿ ಗೊಂಚಲು ಬಾಡಿ ನಿಂತಿತ್ತು
ಏರುಜವ್ವನದ ಮದಕ್ಕೆ ಮುದಿತನವು ತುಂಬಿತ್ತು
ಮತ್ತೆ ಬಾರದ ದಿನಕೆ ಕತ್ತಲು ಆವರಿಸಿತ್ತು



ದೀಪಕ್ ನಾಯ್ಕ್ (ಕುಮಟಾ ,ಕರ್ನಾಟಕ)

### Miss Call ವೈಭವಿ !!!

**ರಾ**ತ್ರಿ ನಿದ್ರೆ ಬಾರದೆ ಮಗ್ಗುಲು ಬದಲಿಸುತ್ತ ಎದ್ದು ಕುಳಿತು ಮತ್ತೆ ಮಲಗಿದೆ . ಜಪ್ಪಯ್ಯ ಎಂದರು ನಿದ್ರೆ ಬರಲಿಲ್ಲ. ಹಾಗೆ ಹೊತ್ತು ಕಳೆಯಲು ಟೀವಿ ಹಚ್ಚಿದೆ. ನಿದ್ರೆ ಬಾರದೆ ಚಡಪಡಿಸುವದಕ್ಕಿಂತ ಟೀವಿ ನೋಡುವುದು ಉತ್ತಮವೆನಿಸಿತು. ರಾತ್ರಿ ನಿದ್ರೆ ಬಂದದ್ದೇ ಗೊತ್ತಾಗಲಿಲ್ಲ. ಬೆಳಿಗ್ಗೆ ಎದ್ದಾಗ ಆಗಲೇ ಹತ್ತು ಗಂಟೆ . ಮೊಬೈಲ್ ನೋಡಿದಾಗ 6 missed call ಇದ್ದವು. ಯಾವುದೊ ಲ್ಯಾಂಡ್ ಲೈನ್ ನಂಬರ್. . ..ಎದ್ದು ಮುಖ ತೊಳೆದು ಮೊಬೈಲ್ ತಗೊಂಡು ತಿಂಡಿ ತಿನ್ನಲು ಕ್ಯಾಂಟೀನ್ ಗೆ ಹೊರಟೆ . ದಾರಿ ಮಧ್ಯೆ ಮೆಸೇಜ್ ನೋಡುತ್ತಿದ್ದಾಗ ಸ್ನೇಹಾಳ 2 ಮೆಸೇಜ್ ಬಂದಿದ್ದವು.

ಸ್ನೇಹಾ ನನ್ನ missed call ಫ್ರೆಂಡ್. ಯಾವದೋ ನಂಬರಿಗೆ ಕಾಲ್ ಮಾಡಲು ಹೋಗಿ ನನಗೆ ಕಾಲ್ ಮಾಡಿದ್ಲು . ನಾನು unknown ನಂಬರಿಂದ ಬರೊ ಕಾಲ್ ಗಳನ್ನ ಸ್ವೀಕರಿಸುವುದಿಲ್ಲ. ಹಾಗೆ unknown ನಂಬರಿಂದ ಬರೊ ಕಾಲ್ ಗಳು ನನ್ನ ಮೂಡ ಆಫ್ ಮಾಡಿದ ಉದಾಹರಣೆಗಳು ಸಾಕಷ್ಟಿದೆ . ಎರಡು ದಿನ ಬಿಟ್ಟು ನಾನೇ ಆ unknown ನಂಬರಿಗೆ ಕಾಲ್ ಮಾಡಿ ವಿಚಾರಿಸೋದು ರೂಢಿ. ಆಗ ಸಿಕ್ಕಿದವಳೇ ಈ ಸ್ನೇಹಾ. ಈ ಸ್ನೇಹಾಳ ಹಾಗೆ ಲತಾ, ಶ್ರುತಿ, ಅಕ್ಷತಾ, ಅನುಷಾ, ದಿಪಾಲಿ, ಸನಾ, ವೇದಾ, ರಮ್ಯಾ , ಪ್ರಿಯಾಂಕ, ಮಾನಸ, ನಮಿತಾ. . . . ಹೀಗೆ ತುಂಬಾ ಜನಾ ಇದ್ರು. ಅವರ ಯಾವ ನಂಬರ್ ಕೂಡ ಈಗ ಚಲನೆಯಲ್ಲಿ ಇಲ್ಲ. ನನ್ನ ಜೊತೆ ಹರಟಲು ಕೆಲವೊಮ್ಮೆ ಅವರ ನಂಬರ್ ಚಾಲನೆ ಗೊಳಿಸುತ್ತಿದ್ದದ್ದು ಉಂಟು, ಅವರ ನಂಬರ್ ಸ್ವಿಚ್ ಆಫ್ ಆದಾಗ ಹೆಚ್ಚು ತಲೆಕೆಡಿಸಿಕೊಳ್ಳದೆ ಅವರ ನಂಬರನ್ನ ಅನಾಯಾಸವಾಗಿ ಮೊಬೈಲ್ ಇಂದ ಕಿತ್ತು ಒಗೆಯುತ್ತಿದ್ದೆ. ನನಗೆ ಅಸಲಿ ತಲೆ ಕೆಡಿಸುತ್ತಿದ್ದದ್ದು ಅವರು ಬೇರೆ ನಂಬರಿಂದ ಕಾಲ್ ಅಥವಾ ಮೆಸೇಜ್ ಮಾಡಿದಾಗಲೇ ! ನಾನು ಅವರಿಗೆ ಏನು ಹೇಳುವುದು ? ಯಾಕೆಂದರೆ ಸುಳ್ಳು ನೆನಪಿಟ್ಟುಕೊಳ್ಳುವುದು ಕಷ್ಟ ಅಲ್ವಾ ? ಹಾಗೆ ಬಂದ ಒಂದು ನಂಬರಿನ ಹೆಸರು ವೈಭವಿ ! ಎರಡು ತಿಂಗಳ ಮೊಬೈಲ್ ಸಂಭಾಷಣೆಯ ನಂತರ ಅವಳ ನಂಬರ್ ಸ್ವಿಚ್ ಆಫ್ ಆಯಿತು. ಅವರ ಹೆಸರು, ವಿದ್ಯಾಭ್ಯಾಸ ,ಅವರ ಊರು , ಎಲ್ಲ ಅವರು ಹೇಳಿದ್ದೆ ನಿಜ ಅಂತ ನಂಬಿದೆ. ಅವರು ಸುಳ್ಳು ಹೇಳಿದ್ದರೂ ನನಗದರಿಂದ ಯಾವ ತೊಂದರೆಯೂ ಇರಲಿಲ್ಲ.

ಆದರೆ ತೊಂದರೆ ಆಗಿದ್ದು ಇವತ್ತು ಬೆಳಿಗ್ಗೆ ಬಂದ 6 missed callsಗಳಿಂದ. ನಾನು ಲ್ಯಾಂಡ್ ಲೈನ್ ನಂಬರೆಂದು ತಿರುಗಿ ಕಾಲ್ ಮಾಡಿದರೆ ಆ ಕಡೆಯಿಂದ ಮಾತಾಡಿದ್ದು ಒಬ್ಬ ಪೋಲಿಸ್ ಅಧಿಕಾರಿ! ನಾನು ನನ್ನ ಹೆಸರನ್ನು ಹೇಳಿದಾಗ, "ನೀವು ಓಮ್ಮೆ ಪೋಲಿಸ್ ಸ್ಟೇಷನ್ ಗೆ ಬನ್ನಿ" ಅಂದ್ರು. ನಾನು , "ಯಾಕೆ ನಾನೇನು ಮಾಡಿದೆ ? "ಅಂದೆ. ಅದಕ್ಕಾತ , " ಸುಮ್ಮನೆ ಬರ್ತೀಯ, ಒದ್ದು ಕರೆದುಕೊಂಡು ಬರಬೇಕಾ ?" ಗದರಿದ. ಮೊದಲೇ ಮರ್ಯಾದೆಗೆ ಅಂಜಿ ಸ್ಟೇಷನ್ ಗೆ ಹೋದೆ.

ನಾನು ಹೋದ ಕೂಡಲೇ ನನಗೆ ಆದರದ ಸತ್ಕಾರವೇ ಸಿಕ್ಕಿತು. ಅಧಿಕಾರಿಯ ಟೇಬಲ್ ಮೇಲಿದ್ದ paper-weight ಗಾಜಿನಲ್ಲಿ ನನ್ನ ಮುಖ ನೋಡಿ ನಾನೇ ಬೆವತಿದ್ದೆ. ಪಕ್ಕದಲ್ಲಿ ಮಧ್ಯ ವಯಸ್ಸಿನ ದಂಪತಿ ಮತ್ತು ಕಣ್ಣಿನಲ್ಲಿ ಕೆಂಡ ಕಾರುತ್ತಾ ನಿಂತ ಯುವಕನಿದ್ದ. ಅಧಿಕಾರಿ ನಾನು ಕುಳಿತ ಕುರ್ಚಿಯ ಮುಂದುಗಡೆಯ ಟೇಬಲ್ಲಿನ ಮೇಲೆ ಕುಳಿತು , "ವೈಭವಿ ಎಲ್ಲಿ?" ಅಂತ ಕೇಳಿದರು . "ನಾನು ಯಾವ ವೈಭವಿ ?"ಎಂದೆ . ಆತ, "9960......0,
ನಿನ್ನ ನಂಬರಲ್ವಾ ?" ಕೇಳಿದರು. ಹೌದೆಂದೆ .ನನಗೆ ಎಲ್ಲ ಸೀನ್ ಅರ್ಥವಾಯಿತು. "ಏನಾಯ್ತು ಸರ್" ಅಂತ ಕೇಳಿದೆ. ವೈಭವಿಯ ಮೊಬೈಲ್ ನಲ್ಲಿ ಕೇವಲ ನನ್ನದೇ ನೂರಾರು ಮೆಸೇಜ್ ಗಳಿದ್ದವು. ವೈಭವಿ ಕಾಣೆಯಾಗಿದ್ದಳು!! ಮನೆಯಲ್ಲಿ ಅಡಗಿಸಿಟ್ಟ ಮೊಬೈಲ್ ಫೋನನ್ನು ಅವಳ ಅಣ್ಣ ಪೋಲಿಸರಿಗೆ ತಂದು ಒಪ್ಪಿಸಿದ್ದ . ಅಧಿಕಾರಿ ಗಡಸು ಧ್ವನಿಯಲ್ಲಿ, "ವೈಭವಿ ಎಲ್ಲಿ ?"ಅಂತ ಕೇಳಿದ . ನನ್ನ ಬಳಿ ಉತ್ತರವಿರಲಿಲ್ಲ .ನಾನು ಇಲ್ಲಿ ಹೇಳಿದ ಕತೆ ಅವರು ನಂಬಲಿಲ್ಲ . ಮತ್ತೊಮ್ಮೆ, " ವೈಭವಿ ಎಲ್ಲಿ?" ಅಂದಾಗ , "ಗೊತ್ತಿಲ್ಲ" ಅಂದೆ. ಎದುರಿಗಿದ್ದ ಲೋಟದ ನೀರನ್ನು ನನ್ನ ಮುಖಕ್ಕೆ ಎರಚಿದ ಪೋಲಿಸ್ ಅಧಿಕಾರಿ.

ತಟ್ಟನೆ ಕಣ್ಣು ಬಿಟ್ಟೆ !! ನನ್ನ ರೂಂಮೇಟ್ , "ಟೀವಿ ಹಚ್ಚಿಕೊಂಡೆ ಮಲಗಿದ್ಯಲ್ಲ, ಕೆಲಸಕ್ಕೆ ಹೋಗಲ್ವಾ?" ಅಂದ ! ಟೀವಿ ಆನ್ ಆಗೇ ಇತ್ತು .ಪಕ್ಕದಲ್ಲಿದ್ದ ಮೊಬೈಲ್ ನೋಡಿದರೆ 3 unread ಮೆಸೇಜ್ ಎದ್ದು ಕಾಣುತಿತ್ತು.... ■


Copyright © KCO – Brindavana

ಸಂಚಿಕೆ
೦೨
ಮಾರ್ಚ್ ೨೦೧೬



ನಾ ಕಂಡಂತೆ ಅಮೆರಿಕಾ

ಸತ್ಯ ಪ್ರಸಾದ್



## 'Free Country' ತಂದ ಫಜೀತಿ !!

**ಪಕ್ಕದಲ್ಲಿ ಬಿಳಿ ಬಟ್ಟೆಯಲ್ಲಿ ಅಲುಗಾಡದೆ ಮಲಗಿರುವ ಆಕೃತಿ ನೋಡುತ್ತಿದ್ದಂತೆ ಪೋಲಿಸ್ ಅಲರ್ಟ್ ಆಗಿ ಬಿಟ್ಟಿದ್ದಾನೆ......**

### 'Free Country' ತಂದ ಫಜೀತಿ !!

**ಅ**ಮೆರಿಕಾಗೆ ಬಂದ ಹೊಸದರಲ್ಲಿ ಒಂದಲ್ಲ ಒಂದು ಈ ತರಹದ ಫಜೀತಿಗಳು ಅನುಭವಕ್ಕೆ ಬಂದಿರುತ್ತವೆ. ವರುಷಗಳು ಕಳೆದ ನಂತರ ನೆನೆಸಿಕೊಂಡರೆ ನಗು ಉಕ್ಕಿಸುತ್ತವೆ. ಅದನ್ನು ಹಂಚಿಕೊಳ್ಳುವ ಒಂದು ಪ್ರಯತ್ನ.

ಸುಮಾರು ಹದಿನೈದು ವರುಷದ ಹಿಂದಿನ ಮಾತು. ನಾನು ಹೊಸದಾಗಿ ಅಮೆರಿಕಾಗೆ ಬಂದವನು ಇಲ್ಲಿನ ಅವೆನೆಲ್ನಲ್ಲಿ ರೂಂ ಮೇಟ್ ಗಳೊಂದಿಗೆ ಅಪಾರ್ಟ್ ಮೆಂಟ್ನಲ್ಲಿ ವಾಸಕ್ಕಿದ್ದೆ. ಪಕ್ಕದ ಮನೆಯಲ್ಲಿ ತಮಿಳುನಾಡಿನಿಂದ ಬಂದ ಶರವಣ, ಮಣಿ ಮತ್ತು ಸೇಗರ್ (ಶೇಖರ್) ಎನ್ನುವ ಹುಡುಗರಿದ್ದರು. ಮೂವರೂ ವಿಭಿನ್ನ ಸ್ವಭಾವದವರು. ಶರವಣನೋ ಅತೀ ಮಾತು, ಮಣಿ ಅದ್ಭುತ ಹಾಡುಗಾರ, ಸೇಗರ್ ಒಳ್ಳೆಯ ಡ್ಯಾನ್ಸರ್ ಮತ್ತು ಇನ್ನೊಂದು ವಿಚಿತ್ರವೆಂದರೆ ಕ್ಷಣಾರ್ಧದಲ್ಲಿ ಕಣ್ಣು ಬಿಟ್ಟುಕೊಂಡೆ ನಿದ್ರೆಗೆ ಜಾರುತ್ತಿದ್ದ !

ವೀಕೆಂಡ್ ಬಂತೆಂದರೆ ಅವರ ಆನಂದಕ್ಕೆ ಪಾರವೇ ಇರುತ್ತಿರಲ್ಲಿಲ್ಲ, ಉತ್ಸಾಹದ ಚಿಲುಮೆಗಳಾಗಿ ಬಿಡುತ್ತಿದ್ದರು. ಶುಕ್ರವಾರ ರಾತ್ರಿ ಬಗೆ ಬಗೆಯ ನಾನ್ ವೆಜ್ ಅಡಿಗೆ ಮಾಡುತ್ತ, ದ್ರವ ಹೀರುತ್ತಾ, ಅತೀ ಜೋರಾಗಿ ಹಾಡು ಹಾಕಿಕೊಂಡು ಬರೀ ಬಾಕ್ಸರ್ ನಲ್ಲಿ, ಮಂದ ಬೆಳಕಿನಲ್ಲಿ, ಗಂಟೆ ಗಟ್ಟಲೆ ಡಾನ್ಸ್ ಮಾಡುತಿದ್ದರು. ಕೇಳಿದರೆ free country, free country.. ಅನ್ನುತ್ತಿದ್ದರು. ಹೀಗೆ ಸುಮಾರು ವಾರಗಳು ಕಳೆದವು... ಇವರ ಅಬ್ಬರ ತಡೆಯದೆ ಯಾರೋ 911 ಕಾಲ್ ಮಾಡಿ ಬಿಟ್ಟರು. ಕಾಪ್ ಬಂದು ಎಷ್ಟೇ ಜೋರಾಗಿ ಬಾಗಿಲು ಬಡಿದರೂ ಆ ಮ್ಯೂಸಿಕ್ ಸೌಂಡ್ ಮುಂದೆ ಇದು ಇವರ ಗಮನಕ್ಕೇ ಬರಲಿಲ್ಲ. ಕಡೆಗೆ ಯಾವುದೇ ಉಪಾಯ ಕಾಣದೆ ಬಾಗಿಲು ಒಡೆದು ಜೋರಾಗಿ ಕೂಗಿಕೊಂಡು ಕಾಪ್ ಒಳ ಬಂದಾಗಲೇ ಇವರು ಎಚ್ಚರಗೊಂಡದ್ದು! ಸಿಡಿಮಿಡಿ ಗೊಂಡ ಪೋಲಿಸ್ ಅಂತಿಮ ಎಚ್ಚರ ಕೊಟ್ಟು ಹೊರಟು ಹೋದ.

ಈ ಘಟನೆಯಿಂದ ಎಷ್ಟು ಹೆದರಿದ್ದರೆಂದರೆ ಈ ಮೂವರು ಮನೆಯಲ್ಲಿ ಜೋರಾಗಿ ಮಾತನಾಡುವುದನ್ನೇ ಬಿಟ್ಟು ಬಿಟ್ಟಿದ್ದರು. ನಾವು ಹೋದರೆ ಕೈ ಸನ್ನೆ ,ಬಾಯಿ ಸನ್ನೆ ಮಾಡುತ್ತಿದ್ದರು.

**ಗಾಯದ ಮೇಲೆ ಬರೆ :**

ಹೀಗೇ ಇರಬೇಕಾದರೆ, ಮಣಿ ಇಂಡಿಯಾಕ್ಕೆ ಹೋಗಿದ್ದ. ಒಂದು ದಿನ ರಾತ್ರಿ ಸೇಗರ್ ಊಟ ಮಾಡಿ ಶುಭ್ರ ಬಿಳಿ ಹೊದಿಕೆಯ ಮುಸುಕು ಹೊದ್ದು ಮಲಗಿದ್ದ. ಶರವಣ ಗಂಟೆಗಟ್ಟಲೆ ಇಂಡಿಯಾಕ್ಕೆ ಒಂದರ ಮೇಲೊಂದು ಫೋನ್ ಮಾಡುತ್ತಿದ್ದ..... ಮಧ್ಯೆ ಅರಿವಿಲ್ಲದೆ 911ಪ್ರೆಸ್ ಮಾಡಿಬಿಟ್ಟಿದ್ದಾನೆ. ದುರಾದೃಷ್ಟವಶಾತ್ ಮತ್ತದೇ ಪೋಲಿಸ್ !! ಶರವಣನ ಮುಖ ನೋಡುತ್ತಿದ್ದಂತೆ ಕಿರಿ ಕಿರಿಗೊಂಡು ಕಾರಣ ಕೇಳಿ, ಹಾಗೆ ಮನೆಯನ್ನು ವೀಕ್ಷಿಸಿದ್ದಾನೆ.

ಅತೀ ಗಲೀಜಾದ ಅಡುಗೆಮನೆ, ಅಲ್ಲಲ್ಲಿ ಚೆಲ್ಲಿರುವ ಚಿಕನ್ ಸಾರು, ರಕ್ತದ ಕಲೆಯಂತೆ ಕಾಣುತ್ತಿದ್ದ ಕೆಂಪು ಟೊಮೇಟೊ ಸೂಪ್, ಪಕ್ಕದಲ್ಲಿ ಬಿಳಿ ಬಟ್ಟೆಯಲ್ಲಿ ಅಲುಗಾಡದೆ ಮಲಗಿರುವ ಆಕೃತಿ ನೋಡುತ್ತಿದ್ದಂತೆ ಪೋಲಿಸ್ ಅಲರ್ಟ್ ಆಗಿ ಬಿಟ್ಟಿದ್ದಾನೆ. ನಿಧಾನವಾಗಿ ಬಿಳಿ ಬಟ್ಟೆಯನ್ನು ಸರಿಸಿದ್ದಾನೆ... ಕಣ್ಣು ಬಿಟ್ಟು ಮಲಗಿರುವ ಸೇಗರ್ ! ಜಾಗೃತಗೊಂಡ ಪೋಲಿಸ್ ಏನೋ ಅನಾಹುತ-ವಾಗಿದೆ ಎಂದು ಶಂಕಿಸಿ, ಸಡನ್ನಾಗಿ ಪಿಸ್ತೂಲ್ ತೆಗೆದವನೇ ಶರವಣನಿಗೆ ಹ್ಯಾಂಡ್ಸ್ ಅಪ್ ಎಂದು ಹೇಳಿ.. ತೀವ್ರವಾಗಿ ಪ್ರಶ್ನಿಸಲು ಶುರು ಮಾಡಿದ್ದಾನೆ... ಏನು ನಡೆಯುತ್ತಿದೆ ಎಂದು ತಿಳಿಯದ ಶರವಣ ಮಾತೇ ಹೊರಡದೆ ಕಂಗಾಲಾಗಿದ್ದಾನೆ. ಕ್ಷಣಾರ್ಧದಲ್ಲಿ ಗಲಾಟೆಯಿಂದ ಎಚ್ಚರ ಗೊಂಡ ಸೇಗರ್ ಪೋಲಿಸ್ ನೋಡಿ ಕಿಟಾರನೆ ಕಿರುಚಿದ್ದಾನೆ...... ನಂತರ ನಡೆದದ್ದು....

ಕೆಲವೇ ತಿಂಗಳಲ್ಲಿ ಮೂವರು ಅವೆನೆಲ್ ಬಿಟ್ಟು ಎಡಿಸನ್ ಗೆ ಹೋದರು.... ಕೇಳಿದರೆ ಪೋಲಿಸ್ ನಮ್ಮನ್ನು ಫಾಲೋ ಮಾಡುತ್ತಿದ್ದಾನೆ ಅನ್ನುತ್ತಿದ್ದರು .
ಸುಮಾರು ವರುಷದ ನಂತರ ಮೊನ್ನೆ ಅಚಾನಕ್ಕಾಗಿ ಶರವಣನನ್ನು ಅಂಗಡಿಯೊಂದರಲ್ಲಿ ಕಂಡೆ.... ಖರೀದಿಸಿದ ಸಾಮಾನುಗಳಿಗೆ ಮಗಳೊಂದಿಗೆ ಬಿಲ್ ಹಾಕಿಸುತ್ತಿದ್ದ.... ಹಳೆಯದೆಲ್ಲ ನೆನಪಾಯ್ತು... ನನ್ನ ನೋಡಿ ನಕ್ಕ... ದೂರದಿಂದ "free country ?" ಅಂದೆ... ಅವನು ತರಕಾರಿ ತೋರಿಸುತ್ತ

" no free" ಅಂದ..... ■

### ನಿಜವಾದ ಸೌಂದರ್ಯ

ನಿಜವಾದ ಸೌಂದರ್ಯ ನೀಳಕಾಯದಲಿಲ್ಲ ,
ಚಂದ್ರನಂತೆ ಹೊಳೆವ ಮುಖದಲಿಲ್ಲ ,
ಮಿಂಚು ಕಂಗಳಲಿಲ್ಲ , ಕೆಂದುಟಿಯಲಿಲ್ಲ ,
ಥಳುಕು ಬಳುಕು - ವನಪು ವಯ್ಯಾರದಲಿಲ್ಲ |

ನಿಜವಾದ ಸೌಂದರ್ಯವಿದೆ :

ಸು-ಮನ ,ಸದ್ವಿಚಾರ,ಸನ್ನಡೆಯಲಿ,
ನೊಂದ ಹೃದಯಕೆ ಮಿಡಿವ ಭಾವದಲಿ,
ಹೃದಯದಿಂ ಬರುವ ಸವಿಮಾತಲಿ,
ಪರಹಿತಕೆ ನಡೆವ ತ್ಯಾಗದಲಿ,
ನೀ ಮಾಡುವ ನಿಸ್ವಾರ್ಥ ಸೇವೆಯಲಿ |

**-ಸುಸ್ಮಿತಾ ಜೋಷಿ (ಬೆಂಗಳೂರು)**

### ಕ್ರಿಕೆಟ್ ವರ್ಲ್ಡ್ ಕಪ್

ಬಹಳ ಸ್ವಾರಸ್ಯ ಈ ಕ್ರಿಕೆಟ್ಟು
ನೋಡುವರು ಜನ ಇದ ನಿದ್ದೆ ಕೆಟ್ಟು

ಭಾರತ ಗೆದ್ದರೆ ' ನಮಗ್ಯಾರಿಲ್ಲ ಮಿಗಿಲು !! '
ಮುಗ್ಗರಿಸಿ ಬಿದ್ದರೆ ' ಎಂಥ ಕಮಂಗಿಗಳು !! '

ತೂರುವರೀಗ ಕಲ್ಲು ಆಟಗಾರರ ಮನೆಗೆ
ಮರೆವರು ಆಟದಿ ಗೆಲುವುದು ಒಂದೇ ತಂಡ ಕೊನೆಗೆ

ಮತ್ತೆ ಈ ನಾಟಕ ಶುರು ನಾಲ್ಕು ವರುಷಕೆ
ಎಲ್ಲಾ ಮರೆತು ಪುನಃ ನೋಡುವರು ಮನಹರುಷಕೆ |

**-ಅನಿಲ್ ಭಾರದ್ವಾಜ**


Copyright © KCO – Brindavana

ಸಂಚಿಕೆ
೦೨
ಜನವರಿ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಕಥಾ ಸಮಯ

ಕೇಶವ ಪ್ರಶಾಂತ್



## ಹೆಸರು ಹೊಳೆಯುತ್ತಿಲ್ಲ – ಬೇಕಾಗಿಲ್ಲ, ಇದು ಕಥೆಯಲ್ಲ - ಅನುಭೂತಿ ?

**ಮಳೆ ಜೋರಾಯಿತು. ಬೀಸುತ್ತಿದ್ದ ಗಾಳಿಯೂ ಕೂಡ. ಪುಸ್ತಕ ಒದ್ದೆಯಾಗದಂತೆ ಪ್ಲಾಸ್ಟಿಕ್ ಕವರೊಳಗಿಟ್ಟು ಎದೆಗವಚಿಕೊಂಡೆ. ಅರ್ಧ ಗಂಟೆ ಹಿಂದೆ ಓದಿದ್ದ ತೇಜಸ್ವಿಯವರ 'ಲಿಂಗ ಬಂದ'ದ ಕಿಟ್ಟಿ ಮತ್ತು ಸುಭದ್ರೆಯ ಮನಸ್ಥಿತಿಗೂ....**


"ಲೈಫು ಇಷ್ಟೇನೆ" ಕೊನೆಯ ಶೋ ನೋಡಿಕೊಂಡು ಸಾಗರ್ ಥಿಯೇಟರನಿಂದ ಹೊರ ಬರುವ ಹೊತ್ತಿಗೆ ಮಳೆ ಬರುವ ಹಾಗಿತ್ತು. ಗಾಂಧೀನಗರದ ರಸ್ತೆಗಳನ್ನು ದಾಟಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಕಡೆಗೆ ನಡೆಯುತ್ತಿರಬೇಕಾದರೆ ಸಣ್ಣಗೆ ಶುರುವಿಟ್ಟುಕೊಂಡ ಗಾಳಿ ಮತ್ತು ಮಳೆಯ ಹನಿಗಳು. ನವೆಂಬರ್ ತಿಂಗಳ ಪ್ರಾರಂಭದಲ್ಲಿ ಬೆಂಗಳೂರಲ್ಲಿ ಮಳೆ ಸಾಮಾನ್ಯ. ಇಂದೇಕೋ ಬೆಳಗ್ಗಿನಿಂದಲೇ ಕಣ್ಣಮುಚ್ಚಾಲೆಯಾಡುತ್ತಿತ್ತು.

ಬಸ್ ಸ್ಟಾಂಡ್ ತಲುಪಿ 356N ವಜ್ರ ಹತ್ತಿ ಹುಸ್ಕೂರುಗೇಟಿಗೆ ಟಿಕೇಟ್ ತೆಗೆದುಕೊಂಡಾಗ ಗಡಿಯಾರ 10 ಗಂಟೆ ತೋರಿಸುತ್ತಿತ್ತು. ಬಸ್ಸಿನ ಕಪ್ಪು ಗಾಜುಗಳು ಹೊರಗಡೆಯ ಪ್ರಪಂಚವನ್ನು ಒಳಗಿರುವವರಿಂದ ಮರೆಮಾಚಿತ್ತು. ಸಪ್ನ ಬುಕ್ ಸ್ಟೋರ್ ನಿಂದ ಕೊಂಡ ತೇಜಸ್ವಿಯವರ 'ಹುಲಿಯೂರಿನ ಸರಹದ್ದು' ಬಿಡಿಸಿ ನಿಂತಲ್ಲಿಯೇ ಓದತೊಡಗಿದೆ.

"ವೀರಸಂದ್ರ – ಯಾರ್ರೀ ಇಳ್ಕೊಳಿ" ಕಂಡಕ್ಟರ್ ನ ಧ್ವನಿ ಕೇಳಿ ಇಳಿಯಲು ತಯಾರಾದೆ. ಮುಂದಿನ ಸ್ಟಾಪು ಹುಸ್ಕೂರುಗೇಟು. ಬಸ್ಸಿಳಿದು ಎ.ಪಿ.ಎಂ.ಸಿ. ಮಾರ್ಕೆಟ್ ರಸ್ತೆಯಲ್ಲಿ ಹೆಜ್ಜೆ ಹಾಕತೊಡಗಿದೆ. ಸಮಯ ಹನ್ನೊಂದೂವರೆ. ಇಂದ್ಯಾಕೋ ರಸ್ತೆ ನಿರ್ಜನವಾಗಿತ್ತು. ಶನಿವಾರದ ರಾತ್ರಿಯಾದ್ದರಿಂದಲೋ ಏನೋ. ರಾತ್ರಿಯ ವೇಳೆ ನಾನ್ಯಾವತ್ತೂ ಈ ರಸ್ತೆಯಲ್ಲಿ ನಡೆದು ಬಂದಿರಲಿಲ್ಲ. ನಾನು ನಡಿಗೆಯ ವೇಗ ಹೆಚ್ಚಿಸಿದೆ. ಮಳೆ ಹನಿಗಳೂ ನಾವೇನೂ ಕಮ್ಮಿಯಿಲ್ಲವೆಂಬಂತೆ ಜೋರಾಗಿ ಸುರಿಯತೊಡಗಿದವು. ಜಿಟಿ ಜಿಟಿ ಮಳೆ, ತಣ್ಣನೆಯ ಕುಳಿರ್ಗಾಳಿಯಿಂದಾಗಿ ಬೆನ್ನು ಹುರಿಯ ಮೇಲೆ ಮಂಜುಗಡ್ಡೆ ಸವರಿದಂತಾಗಿ ಚಳಿಯಿಂದ ನಡುಗುತ್ತಿದ್ದೆ.

ಮೊದಲ 100 ಮೀಟರ್ ದೂರ ಬಿಟ್ಟರೆ ಹುಸ್ಕೂರು ರಸ್ತೆಯಲ್ಲಿ ಬೀದಿ ದೀಪಗಳಿಲ್ಲ. ಬಲಬದಿಯಲ್ಲೊಂದು ತೆಂಗಿನ ತೋಟ. ಜನರು ಮಾತನಡಿಕೊಳ್ಳುವ ಪ್ರಕಾರ ತೆಂಗಿನ ತೋಟದ ಓನರ್ ಎಲ್ಲೋ ವಿದೇಶದಲ್ಲಿರುವುದಂತೆ. ತುಂಬಾ ದುಡ್ಡಿದೆಯಂತೆ. ಜಾಗದ ಮೇಲೆ ಏನೋ ವಿವಾದವಿದೆಯಂತೆ. ಅದಕ್ಕೆ ಯಾರೂ ತೋಟ ನೋಡಿಕೊಳ್ಳುತ್ತಿಲ್ಲವೇನೋ. ಆದರೆ ಹಾಳು ಬಿದ್ದಿದ್ದಂತೂ ನಿಜ. ಒಳಗೆಲ್ಲಾ ಕಳೆಗಿಡಗಳು ತುಂಬಿ ಹಗಲಿನಲ್ಲೂ ದಟ್ಟವಾಗಿ ಅಭೇದ್ಯ ಕಾಡಿನಂತೆ ಕಾಣಿಸುತ್ತದೆ. ಒಳಗೊಂದು ಹಾಳು ಬಿದ್ದ ದೊಡ್ಡ ಮನೆ ಬೇರೆ. ಸಿನಿಮಾದಲ್ಲಿ ಬರುವ ದೆವ್ವದ ಬಂಗಲೆಯಂತೆ. ರಸ್ತೆಯ ಎಡ ಬದಿಗೆ ಯಾರೋ ಬೇಲಿ ಹಾಕಿಟ್ಟ ಖಾಲಿ ಸೈಟುಗಳು.

ಮಳೆ ಜೋರಾಯಿತು. ಬೀಸುತ್ತಿದ್ದ ಗಾಳಿಯೂ ಕೂಡ. ಪುಸ್ತಕ ಒದ್ದೆಯಾಗದಂತೆ ಪ್ಲಾಸ್ಟಿಕ್ ಕವರೊಳಗಿಟ್ಟು ಎದೆಗವಚಿಕೊಂಡೆ. ಅರ್ಧ ಗಂಟೆ ಹಿಂದೆ ಓದಿದ್ದ ತೇಜಸ್ವಿಯವರ 'ಲಿಂಗ ಬಂದ'ದ ಕಿಟ್ಟಿ ಮತ್ತು ಸುಭದ್ರೆಯ ಮನಸ್ಥಿತಿಗೂ, ಈ ನಿರ್ಜನ ರಸ್ತೆಯಲ್ಲಿ ರಾತ್ರಿ 11.45 ಕ್ಕೆ ಹೆಜ್ಜೆ ಹಾಕುತ್ತಿರುವ ನನ್ನ ಮನಸ್ಥಿತಿಗೂ ಏನೂ



ವ್ಯತ್ಯಾಸವಿರಲಿಲ್ಲ. ಭಯವೆನಿಸಿತು. ಕತ್ತಲ ಸಾಮ್ರಾಜ್ಯದ ಹೆದ್ದಾರಿಯಂತಿದ್ದ ರಸ್ತೆಯಲ್ಲಿ ಹಣ್ಣು ಹೇರಿಕೊಂಡಿದ್ದ ಲಾರಿಯೊಂದು ಮಾರ್ಕೆಟ್ ನ ಕಡೆಗೆ ನಿಧಾನವಾಗಿ ಹೋಯ್ತು. ಕೈ ತೋರಿಸಿದರೂ ಡ್ರೈವರ್ ನಿಲ್ಲಿಸಲಿಲ್ಲ. ಇಂದೇಕೋ ದಿನ ಸರಿಯಿಲ್ಲ. ಸಣ್ಣದಾಗಿ ಹುಟ್ಟಿದ ಭಯದ ಅಲೆ ಮನದಾಳದಲ್ಲೆಲ್ಲೋ ನಿಧಾನವಾಗಿ ಎದ್ದೆದ್ದು ಭೋರ್ಗರೆಯತೊಡಗಿದಂತೆ ಅನುಭೂತಿ ! ಯಾರ್ಯಾರೋ ಹೇಳಿದ ಮಾರ್ಕೆಟ್ ರಾಜನ ವಿಚಿತ್ರ ಖಯಾಲಿಯ ಕಥೆಗಳು : ಮಾರ್ಕೆಟ್ ರಾಜ, ಹಣ್ಣು ಮಾರುಕಟ್ಟೆಯ ಸುತ್ತ ಅಡ್ಡಾಡುತ್ತಾನಂತೆ, ರಾತ್ರಿಯಿಡೀ ಕುಡಿದು ಬೈಕ್ ಓಡಿಸುತ್ತಾನಂತೆ. ಒಂಟಿಯಾಗಿ ಯಾರಾದರೂ ಸಿಕ್ಕರೆ ಚಾಕುವಿನಲ್ಲಿ ಹೆದರಿಸಿ ಪರ್ಸ್,ಮೊಬೈಲ್ ಕೀಳುತ್ತಾನಂತೆ, ಕೊಡದಿದ್ದರೆ ಚುಚ್ಚಿಯೇ ಬಿಡುತ್ತಾನಂತೆ.

ಹಿಂದೆಲ್ಲೋ ಓದಿದ್ದ ರಿಪ್ಪರ್ ಚಂದ್ರನ್ ನ ಕೊಲೆಯ ಕಥೆಗಳು ಎಲ್ಲಾ ನೆನಪಾಗಿ ತಣ್ಣಗಿನ ಮಳೆಯಲ್ಲೂ ಮೈ ಬೆವರತೊಡಗಿತು. ನಡಿಗೆಯ ವೇಗ ತನ್ನಿಂತಾನೆ ಹೆಚ್ಚಾಯಿತು.

ರಸ್ತೆಯ ತಿರುವಿನಲ್ಲೊಂದು ಯಾವುದೋ ಟ್ರಸ್ಟ್ ನಡೆಸುವ ಸ್ವಯಂ- ಸೇವಾ ಕೇಂದ್ರವಿದೆ. ಹೊರಗೆ ರಸ್ತೆಗೆ ಕಾಣಿಸುವುದು ದೊಡ್ಡದಾದ ಗೇಟು ಮಾತ್ರ. ಯಾಕೋ ಗೊತ್ತಿಲ್ಲ. ಆ ಗೇಟನ್ನು ನಾನು ಹಗಲಿನಲ್ಲೂ ಓಡಾಡಬೇಕಾದರೆ ಕುತೂಹಲದಿಂದ ದಿಟ್ಟಿಸುತ್ತಿರುತ್ತೇನೆ. ಇವತ್ಯಾಕೋ ಗೇಟಿನ ಹಿಂದೆ ಕತ್ತಲಲ್ಲಿ ಅಸ್ಪಷ್ಟವಾಗಿ ಯಾರೋ ಕೊಡೆ ಹಿಡಿದು ನಿಂತಂತೆ, ಗೇಟು ತೆರೆದುಕೊಂಡಂತೆ, ಆ ಆಕೃತಿ ನನ್ನನ್ನೇ ಹಿಂಬಾಲಿಸಿಕೊಂಡು ಬಂದಂತೆಲ್ಲಾ ಅನಿಸತೊಡಗಿತು. ನಿಜವಾಗಿಯೂ ಯಾರಾದರೂ ಬರುತ್ತಿದ್ದರೋ ಅಥವಾ ಮನಸ್ಸಿನೊಳಗಿನ ಭಯ ಹೆತ್ತ 'ಬೇಡದ ಕೂಸ' ದೇವರೇ ಬಲ್ಲ. ಎದೆಯೊಳಗೆ 160 kmph ವೇಗದಲ್ಲಿ ರೈಲು ಇಂಜಿನ್ ಹಾದು ಹೋದಂತೆ ಢವಢವ. I was almost running, ಓಡತೊಡಗಿದೆ. ದೂರದಲ್ಲಿ ಒಂಟಿ ದೀಪದ ಸಣ್ಣದೊಂದು ಬೆಳಕು ಕಾಣುವವರೆಗೂ.

ಬೆಳಕು ಹತ್ತಿರ ಬಂದಂತೆ ಸ್ಪಷ್ಟವಾಗತೊಡಗಿತು – ಬೈಕಿನ ಹೆಡ್ ಲೈಟ್. ಶರತ್ ನ ಹೋಂಡಾ, ನನ್ನನ್ನೇ ಹುಡುಕಿಕೊಂಡು. ಜೀವ : "ಬದುಕಿದೆಯಾ ?"– "Yes... ಬದುಕಿದೆ" .

ಇನ್ನೂ ಬೆವರುತ್ತಿದ್ದೇನೆ. ಮನೆಗೆ ಬಂದು ಒಂದು ಗಂಟೆಯಾಯಿತು. ಮಳೆ ಕಡಿಮೆಯಾಗಿಲ್ಲ. ಮುಂದಿರುವ ನೀಲಗಿರಿ ಮರಗಳಿಂದ ಬೀಳುತ್ತಿರುವ ಹನಿಗಳ ರಭಸ ಕಡಿಮೆಯಾಗಿಲ್ಲ, ಯಾಕೊ ಗೊತ್ತಿಲ್ಲ – ಮನದೊಳಗಿನ ಭಯವೂ ಸಹ ! ■


Copyright © KCO – Brindavana

ಸಂಚಿಕೆ
೦೨
ಮಾರ್ಚ್ ೨೦೧೬

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಓ ನನ್ನ ಚೇತನ



ಅಹೀಶ ಭಾರದ್ವಾಜ

# ಇ-ಲೋಕದಲ್ಲಿ ನಾವೂ, ನೀವೂ, ಮುಂದಿನ ಪೀಳಿಗೆಯೂ....

*ಅಂತಹ ಕಾಲಘಟ್ಟದಲ್ಲಿ ಮಾನವ ಕೇವಲ ಮೂಳೆ -ಮಾಂಸದ ಹೊದಿಕೆ. ಮತ್ತೆಲ್ಲವೂ ಬರಿ ತಂತ್ರಜ್ಞಾನದ ಅವಲಂಬಿಕೆ. ಆ ತಂತ್ರಜ್ಞಾನವು ಸಡಿಲವಾದರೆ ಅವನೇನೇನೂ ಮಾಡಲಾರ, ತಂತ್ರಜ್ಞಾನದ ದಾಸ!! ಇದ್ದರೂ ಇಲ್ಲದಂತೆ!*

"**ಯಾ**ರಿಗೆ ಬೇಕು ಈ ಲೋಕ....." ಇದು 'ಸಿಪಾಯಿ' ಚಿತ್ರದಲ್ಲಿನ ಹಾಡಿನ ಸಾಹಿತ್ಯ. ಆದರೆ ಈಗ ಹಾಗಿಲ್ಲ, ನಮಗೆ ಈಗಿನ ಪರಿಸ್ಥಿತಿಯಲ್ಲಿ **e-ಲೋಕ** ಬೇಕೇ ಬೇಕು ಅನ್ನುವ ಸಂದರ್ಭ ಸೃಷ್ಟಿಯಾಗಿದೆ. ಇದರಿಂದ ಹೊರ ಬರಲು ಸಾಧ್ಯವಿಲ್ಲ, ಅದರ ವರ್ತುಲದಲ್ಲಿ ಸಿಲುಕಿ, ಅದನ್ನು ನಮ್ಮ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡಿದ್ದೇವೆ. ಹಾಗೆಯೇ ಸ್ವಲ್ಪ ಹಿಂದಕ್ಕೆ ನೋಡುತ್ತಾ ಹೋಗಿ, ಈ 'e' ಎಂಬುದು ೧೯೭೫ ಇಸವಿಯ ಆಸುಪಾಸಿನಲ್ಲಿ ನಮ್ಮ ದಿನನಿತ್ಯದ ಬಳಕೆಯ ವಸ್ತುವಾಗಿ ಒಂದು ಚಿಕ್ಕ calculator ರೂಪದಲ್ಲಿ ನಮ್ಮ ಕೈಸೇರಿತು. ಅಲ್ಲಿಂದ ಶುರುವಾಯಿತು ನೋಡಿ eದರ ಲಗ್ಗೆ!! ಆ ದಿನಗಳಲ್ಲಿ ಅದೊಂದು ಮಹತ್ತರವಾದ e-ಉಪಕರಣ. ಈ calculator ಬರುವುದಕ್ಕೆ ಮುಂಚೆ ನಾವುಗಳು ಎಂತಹ ಕ್ಲಿಷ್ಟಕರವಾದ ಗುಣಿಸುವ, ಕೂಡುವ, ಭಾಗಿಸುವ ಲೆಕ್ಕಗಳನ್ನು ಬಹಳ ಸರಾಗವಾಗಿ ಪುಸ್ತಕಗಳಲ್ಲಿ ಬಿಡಿಸುತ್ತಿದ್ದೆವು. ಅದು ನಮ್ಮ ಬುದ್ಧಿಶಕ್ತಿಯನ್ನು ಚುರುಕುಗೊಳಿಸಲು ಬಹಳ ಉಪಯುಕ್ತವಾಗಿತ್ತು. ಯಾವಾಗ ಕ್ಯಾಲ್ಕುಲೇಟರ್ ನ ಬಳಕೆ ಹೆಚ್ಚಾಗುತ್ತಾ ಬಂತೋ , ನಾವುಗಳು ಸಾಧಾರಣ ಲೆಕ್ಕಾಚಾರಗಳಿಗೂ, ತಿಳಿದೂ-ತಿಳಿಯದವರಂತೆ ಅದರ ಮೇಲೆ ಅವಲಂಬಿಸುತ್ತಾ ಬಂದಿದ್ದೇವೆ. 15*5=75 ಎನ್ನುವುದಕ್ಕೂ, 65-12=? ತಿಳಿಯುವುದಕ್ಕೂ ಕ್ಯಾಲ್ಕುಲೇಟರ್ ನ ಮೊರೆಹೋಗುತ್ತೇವೆ. Atleast confirm ಮಾಡಿಕೊಳ್ಳುವುದಕ್ಕೆ! ಎಂತಹ ವಿಪರ್ಯಾಸವಲ್ಲವೇ ? ಕಾಲಕ್ರಮೇಣ ಇದು ನಮ್ಮ ದಿನನಿತ್ಯದ ಒಂದು ಅವಿಭಾಜ್ಯ ಅಂಗವಾಗಿ, ನಮ್ಮ ಮೆದುಳಿನ ಲೆಕ್ಕಾಚಾರದ ವಿಭಾಗವನ್ನು ಇದಕ್ಕೇ ವಹಿಸಿಬಿಟ್ಟಿದ್ದೇವೆ.

ಹೀಗೆಯೇ ದಿನಗಳೆದಂತೆ ಮುಂದೊಂದು ದಿನ ಬಂದಿದ್ದು, ಕಂಪ್ಯೂಟರ್ ಮೂಲಕ ಬರೆಯುವ ಸಾಧನಗಳು.

ಅಂದರೆ, Notepad, Searchpad, Microsoft-Office.ಇವುಗಳಲ್ಲಿ ಹೆಚ್ಚಾಗಿ ಪ್ರಭಾವಬೀರಿದ್ದು MS-Office. ನಾವು ದಿನನಿತ್ಯವೂ ವ್ಯವಹರಿಸುವ ಮನೆಯ, ಶಾಲಾ-ಕಾಲೇಜಿನ, ಕಛೇರಿಯ ಕೆಲಸಗಳು ಗಣಕೀಕೃತಗೊಂಡಾಗ , ನಾವುಗಳು ಸ್ವಹಸ್ತದಿಂದ ಬರೆಯುವ ಕಲೆ, ಶಕ್ತಿ ಅಥವಾ ರೂಢಿ ಕ್ರಮೇಣವಾಗಿ ನಶಿಸುತ್ತಿದೆ. ಕೈಯಲ್ಲೊಂದು ಕಾಗದ, ಪೆನ್ನು ಹಿಡಿದು ಬರೆಯಲು ಕುಳಿತರೆ, ಕೈಬರಹ ಸಾಧ್ಯವೇ ಎಂಬ ಭಾವನೆ . (ಈ ಲೇಖನದ ಹಸ್ತಪ್ರತಿ ಬರೆಯುವಾಗಲೂ ಇದೇ ಅನುಭವ ಆಗಿತ್ತು) .

ಇವುಗಳ ನಂತರದ್ದು ಇ-ಮೇಲ್ ಎಂಬ ಸಾಧನ. ಒಬ್ಬರನ್ನೊಬ್ಬರು ಸಂಪರ್ಕಿಸುವ ಮಾದರಿಯನ್ನೇ ಬದಲಾಯಿಸಿ ಹೊಸ ಕ್ರಾಂತಿಯನ್ನೇ ಸೃಷ್ಟಿಸಿತು. ಅಲ್ಲಿಯ ತನಕ ಕಾಗದ , ಇನ್ ಲ್ಯಾಂಡ್ ಲೆಟರ್, ಏರ್-ಮೇಲ್ ಗಳ ಮೂಲಕ ಪತ್ರ ವ್ಯವಹಾರ ಮಾಡುತ್ತಿದ್ದ ನಮಗೆ, ಒಂದು ಕಂಪ್ಯೂಟರ್ ಇ-ಮೇಲ್ ಅಪ್ಲಿಕೇಶನ್ , ಇಂಟರ್ ನೆಟ್ ಮೂಲಕ ಇ-ಪತ್ರವನ್ನು ಬರೆದು , ಪ್ರಪಂಚದ ಯಾವುದೇ ಭಾಗಕ್ಕೆ ಕ್ಷಣದಲ್ಲಿ ತಲುಪಿಸುವ ಸೌಲಭ್ಯವನ್ನು ಕಲ್ಪಿಸಿಕೊಟ್ಟಿತು. ಇದು ತಂತ್ರಜ್ಞಾನದ ಪ್ರಗತಿಯ ಕಿರೀಟಕ್ಕೆ ಮತ್ತೊಂದು ಗರಿ ಇಟ್ಟಂತೆ. ಆದರೂ ನಾವುಗಳು ಒಂದೊಂದಾಗಿ ಹಳೆಯ ಸಾಧನಗಳನ್ನು ಕಳೆದುಕೊಳ್ಳುತ್ತಿದ್ದೇವೆ ಅನಿಸುತ್ತದೆ. ಕಾಗದ ,ಪತ್ರಗಳನ್ನು ಸ್ವಹಸ್ತದಿಂದ ಬರೆದು ಪೋಸ್ಟ್




ಮಾಡಿ, ಅದಕ್ಕೆ ಜವಾಬಿನ ಪತ್ರವನ್ನು ಕಾತುರದಿಂದ ಕಾಯುವ ಕಾಲವೊಂದಿತ್ತು. ಅಲ್ಲೊಂದು ಕುತೂಹಲ ,ನಿರೀಕ್ಷೆ ಇರುತ್ತಿತ್ತು. ಪ್ರೇಮಿಗೆ ಪ್ರಿಯಕರನ ಪತ್ರಕ್ಕೆ, ಹಾಸ್ಟೆಲ್ಲಿನಲ್ಲಿರುವ ವಿದ್ಯಾರ್ಥಿಗೆ ತನ್ನಪ್ಪ ಕಳಿಸುವ ಮನಿಯಾರ್ಡರ್ ಸಿಗುವ ತವಕ, ದೂರದ ಊರಿನ ಸಂಬಂಧಿಯ ಆರೋಗ್ಯ ಸುಧಾರಣೆಯ ನಿರೀಕ್ಷೆಯ ಪತ್ರ , ಹೀಗೆ ಹತ್ತು ಹಲವು. ಈಗ ಕ್ಷಣಮಾತ್ರದಲ್ಲಿ ಎಲ್ಲವೂ ಲಭ್ಯ. ಅಷ್ಟೇ ಅಲ್ಲದೇ chat , video conferencing ತಂತ್ರಜ್ಞಾನದ ಮೂಲಕ ಬಹಳ ಹತ್ತಿರವಾಗಿದ್ದೇವೆ. ಈ ತಂತ್ರಜ್ಞಾನಗಳು ಹೊಸ ಹೊಸ ಸಾಧನಗಳ ಉತ್ಪನ್ನಕ್ಕೆ ನಾಂದಿಯಾದರೆ , ಹಳೆಯ ಸಾಧನಗಳು ನಿಧಾನವಾಗಿ ನಶಿಸುತ್ತಾ ಹೋಗುತ್ತಿವೆ. ಎಷ್ಟೋ ಅಂಚೆ ಕಛೇರಿಗಳು ಹೆಚ್ಚಿನ ಕೆಲಸವಿಲ್ಲದೇ ಮುಚ್ಚಿಹೋಗಿವೆ. ಮುಂದಿನ ಪೀಳಿಗೆಯ ಜನರಿಗೆ ಇವೆಲ್ಲಾ ಚರಿತ್ರೆಯ ಪುಟಕ್ಕೆ ಸೇರಿದ ವಿಷಯವಾಗಿ, ವಸ್ತುಸಂಗ್ರಹಾಲಯದ ಒಂದು ಗಾಜಿನ ಪೆಟ್ಟಿಗೆಯಲ್ಲಿ ಕಂಡುಬರುವುದರಲ್ಲಿ ಆಶ್ಚರ್ಯವೇನಿಲ್ಲ ! ಕಾಲಾಯ ತಸ್ಮೈ ನಮಃ !

ಸರಿ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಬಂದಂತಹ ಮತ್ತೊಂದು e - ಲಗ್ಗೆಯೆಂದರೆ ,ಮನೆಯಿಂದಲೇ ಇಂಟರ್ನೆಟ್ ಮೂಲಕ ಸಾಮಾನುಗಳನ್ನು ಖರೀದಿಸುವ ಸೌಲಭ್ಯ. ಅದುವೇ e-commerce.

ಇದೂ ಕೂಡ ತೊಂಬತ್ತನೇ ಇಸವಿಯ ಅಂತ್ಯದಲ್ಲಿ ಹೊಸ ಕ್ರಾಂತಿಯನ್ನೇ ಹುಟ್ಟು ಹಾಕಿ , ಹೊಸ ಬಗೆಯ ಎಷ್ಟೋ ಆವಿಷ್ಕಾರಗಳಿಗೆ ನಾಂದಿಯಾಯಿತು. ಹಾಗೆಯೇ ಮುಂದಿನ ದಿನಗಳಲ್ಲಿ ತಂತ್ರಜ್ಞಾನ ಮುಂದುವರೆದು ಹೆಚ್ಚು ಹೆಚ್ಚು ಜನ ಸಾಮಾನ್ಯರು ತಮ್ಮ ಕಂಪ್ಯೂಟರಗಳಿಂದ , ಮೊಬೈಲ್ ಡಿವೈಸ್ ಗಳಿಂದ ತಮಗೆ ಬೇಕಾದ ಪದಾರ್ಥಗಳನ್ನು ಮನೆಯಲ್ಲೋ, ಕಾರಲ್ಲಿ ಕುಳಿತೋ ಆರ್ಡರ ಮಾಡಿ, ನೇರವಾಗಿ ಪಡೆಯುವ ಸೌಲಭ್ಯ ಸರ್ವೇಸಾಮಾನ್ಯವಾಯಿತು. ಜನರು ಪದಾರ್ಥಗಳನ್ನು ಖರೀದಿಸಲು ಅಂಗಡಿಗೋ, shopping mallಗೆ ಹೋಗುವುದು ಕಡಿಮೆಯಾಗುತ್ತ ಹೋಗಿದೆ. ಅದರ ಜೊತೆಗೆ Brick and Mortar ಮಾದರಿಯ ಎಷ್ಟೋ ಅಂಗಡಿಗಳು ದಿವಾಳಿಯಾಗಿ ಮುಚ್ಚಿ ಹೋಗಿವೆ. ಮುಂಬರುವ ನೂರಾರು ವರ್ಷಗಳಲ್ಲಿ ಅಂಗಡಿಗೆ ಹೋಗಿ ಸಾಮಾನು ಖರೀದಿಸುವ ಸೌಲಭ್ಯವೇ ಇರುವುದಿಲ್ಲವೇನೋ ?

ಈಗಾಗಲೇ ಹೆಚ್ಚು ಹೆಚ್ಚು ಕ್ರೆಡಿಟ್-ಕಾರ್ಡುಗಳ ಉಪಯೋಗಿಸುವಿಕೆಯಿಂದ ಜನರು ನೋಟುಗಳನ್ನು ತಮ್ಮಲ್ಲಿ ಇಟ್ಟುಕೊಂಡು ಓಡಾಡುವುದು ಕಡಿಮೆಯಾಗಿದೆ. ಹಾಗೆಯೇ bitcoin (digital currency) ಮಾದರಿಯ ಹಣ ವಿನಿಮಯ ವಿಧಾನ ಮುಂದೊಂದು ದಿನ ಸರ್ವೇಸಾಮಾನ್ಯವಾಗಬಹುದು. ಮುಂದಿನ ಪೀಳಿಗೆಗಳ ಜನರು ಹಣದ ನೋಟುಗಳಿಂದ ವ್ಯವಹಾರವನ್ನು ಮಾಡುವುದೇ ಇಲ್ಲವೇನೋ? ಎಲ್ಲವೂ digital currency. ಇ-ಮಯ!! ನಾವುಗಳು ಈಗ ಉಪಯೋಗಿಸುವ ಹಣದ ನೋಟುಗಳು ಮುಂದಿನ ವರ್ಷಗಳಲ್ಲಿ ವಸ್ತುಸಂಗ್ರಹಾಲಯದ ಗಾಜಿನ ಪೆಟ್ಟಿಗೆ ಸೇರಲೂಬಹುದು, ಯಾರಿಗೆ ಗೊತ್ತು?

ಇನ್ನೊಂದು ವಿಚಾರವನ್ನು ಇಲ್ಲಿ ಹೇಳಬೇಕೆಂದರೆ GPS Navigation System. ಒಂದು ಕಡೆಯಿಂದ ಇನ್ನೊಂದು ಕಡೆಗೆ ದಾರಿ ಸೂಚಿಸುವ ಉಪಯುಕ್ತ ಸಾಧನ. ಇದು ಬಂದ ಮೇಲಂತೂ ನಾವುಗಳು ನಮ್ಮ ತಲೆಗೆ , ದಾರಿ ಹುಡುಕುವ ಕಷ್ಟವನ್ನು ಕೊಡುವುದೇ ಇಲ್ಲ!! ಅದಿಲ್ಲದೇ ಗಾಡಿ ಮುಂದಕ್ಕೆ ಹೋಗುವುದೇ ಇಲ್ಲ!! ಕೆಲವರಂತೂ ಎಷ್ಟರಮಟ್ಟಿಗೆ ಈ ತಂತ್ರಜ್ಞಾನಕ್ಕೆ ಶರಣಾಗಿದ್ದಾರೆಂದರೆ ತಾವು ಯಾವತ್ತೂ ಹಾದು ಹೋಗಿರದ ಅಕ್ಕಪಕ್ಕದ ಬೀದಿಯಲ್ಲಿಯೇ GPS ಕೈ ಕೊಟ್ಟರೆ, ಮನೆ ತಲುಪಲು ಅವರ ಫಜೀತಿ ನೋಡಬೇಕು. This is height of surrenderness to technology.

ಇನ್ನು messaging appsಗಳು ಹೆಚ್ಚು ಬಳಕೆಗೆ ಬಂದ ಮೇಲಂತೂ, ಎಲ್ಲವೂ ಕ್ಷಣದಲ್ಲಿ ಲಭ್ಯ, ಜೊತೆಗೆ ಅದರದೇ ಆದ ಸಂಕ್ಷಿಪ್ತ ಪದಗಳು, ಸಂಕೇತಾಕ್ಷರಗಳು ಹಾಗೂ ತಪ್ಪಾದ ಪದಗಳಿಗೆ ತಂತಾನೆ ಪದಬರಿಗೆ (auto spell check) ಸೂಚಿಸುವುದು, ನಮ್ಮಗಳ ಭಾಷೆಯ ಮೇಲಿನ ಹಿಡಿತವನ್ನು ಕ್ರಮೇಣ ಕುಂದಿಸುತ್ತಿದೆಯೇ ಎನ್ನುವ ಅನಿಸಿಕೆ. ಇವುಗಳು ಒಬ್ಬರಿಗೊಬ್ಬರು ಪರಸ್ಪರ ಮಾತನಾಡುವುದನ್ನು ಕಡಿಮೆಗೊಳಿಸಿದೆ. ಅದು ಎಷ್ಟರಮಟ್ಟಿಗೆಂದರೆ, ಮಕ್ಕಳುಗಳು ತಮ್ಮ ಮನೆಯಲ್ಲಿದ್ದುಕೊಂಡೇ ಮನೆಯ ಇನ್ಯಾವುದೋ ಕೋಣೆಯಲ್ಲಿರುವ ಅಪ್ಪ ಅಮ್ಮರೊಂದಿಗೆ ಖುದ್ದಾಗಿ ಮಾತನಾಡುವ ಬದಲು chatನಲ್ಲೇ ಮಾತುಕತೆ ಮುಗಿಸುತ್ತಾರೆ.

(ಮುಂದಿನ ಪುಟಕ್ಕೆ..)


Copyright © KCO – Brindavana

# ಬೃಂದಾವನ ವಾಣಿ


ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ


## ನಾನು ಓದಿದ ಪುಸ್ತಕ

ವಿನೋದ್ ಶಾಮಸುಂದರ್



**ಮಾತಿಗೂ ಮುತ್ತಿಗೂ ಇರುವ ಸಂಬಂಧವನ್ನು ತಿಳಿಸುತ್ತಾ..... " ಸಂಗಾತಿ ತುಟಿಗೆ ತುಟಿಯೊತ್ತಿ , ಉಸುರುವ ಒಂದೊಂದು ಮಾತೂ ನುಡಿಮುತ್ತು!!! " ಎನ್ನುತ್ತಾರೆ !**




**ಕೆ**ಲ ದಿನಗಳ ಹಿಂದೆ ಸ್ನೇಹಿತರ ಮನೆಯ Coffee Table ನ ಮೇಲೆ ಕಂಡ ಪುಸ್ತಕ ,ಡುಂಡಿರಾಜರ "ಬೋಳಾಯ ತಸ್ಮೈ ನಮಃ" . ನಗು ಉಕ್ಕಿಸುವಂತಿದ್ದ ಶೀರ್ಷಿಕೆಯೇ ಆ ಪುಸ್ತಕವನ್ನು ಓದಬೇಕೆನ್ನುವ ಕುತೂಹಲ ತಂದಿತ್ತು.

ವಸಂತದಿಂದ ಭಗವಂತನವರೆಗೂ
ಮೋದಿಯ ಚಹ ಕಪ್ ನಿಂದ ಧೋನಿಯ ವಿಶ್ವಕಪ್ ವರೆಗೂ,
ಲಂಬೋದರನ ಹೊಟ್ಟೆಯಿಂದ " ಕರೀನಾ "ಳ ಕುಣಿತದವರೆಗೂ,
ಯಾರನ್ನೂ, ಯಾವುದನ್ನೂ ಬಿಡದೆ ಬೋಳಿಸಿರುವ
ಡುಂಡಿರಾಜಾಯ ತಸ್ಮೈ ನಮಃ!

ಒಂದು ಪುಟ್ಟ ಲೇಖನವನ್ನು ಬರೆಯಬೇಕಾದರೆ ಅದೆಷ್ಟು ತಲೆ ಓಡಿಸಬೇಕು ಅಂತ ಬರೆದವರನ್ನೇ ಕೇಳಬೇಕು! ಅಂಥದ್ದರಲ್ಲೂ ಹಾಸ್ಯ ಲೇಖನವೆಂದರೆ ಕೇಳಬೇಕೆ? ಅಂತಹ ಹಾಸ್ಯ ಲೇಖನಗಳಲ್ಲಿ ಲಘು ಚುಟುಕಗಳನ್ನು, ಪದ್ಯಗಳನ್ನು, ರಾಜಕೀಯವನ್ನು, ಸಂಸಾರವನ್ನು, ಸಂಸ್ಕೃತಿಯನ್ನು ಮತ್ತು ಧರ್ಮವನ್ನೂ ಸೇರಿಸಿ ಕಚಗುಳಿ ಇಟ್ಟು ನಗಿಸುವ ಚಾತುರ್ಯ ಡುಂಡಿರಾಜರ "ಬೋಳಾಯ ತಸ್ಮೈ ನಮಃ "! ಇಷ್ಟೆಲ್ಲ ರಸಗಳಿದ್ದರೂ ಅವರು ಪುಸ್ತಕಕ್ಕೆ ಕೊಡುವ ಪರಿಚಯ "ಲಘು ಲೇಖನಗಳು " ಎಂದು.
ಅವರು ಪುಸ್ತಕವನ್ನು ಶುರು ಮಾಡುವುದೇ ಹಾಸ್ಯದ ಅರ್ಥ ವಿವರಿಸುವುದರಿಂದ. "ಗಂಭೀರವಾಗಿ ಯೋಚಿಸಿದಾಗ ಹೊಳೆಯದ ವಿಚಾರಗಳು, ಕಟು ಸತ್ಯಗಳು, ಹಾಸ್ಯದ ನೆಲೆಯಲ್ಲಿ ನಿಂತು ನೋಡಿದಾಗ ನಮ್ಮ ಅರಿವಿಗೆ ಬರಬಹುದು!" ಎಂದು ವಿವರಿಸುತ್ತ ಅದೇ ಅರಿವನ್ನು ಮೊದಲ ಪುಟದಿಂದ ಕೊನೆಯದರವರೆಗೂ ಹಾಸ್ಯವಾಗಿ ತೋರಿಸುತ್ತಾರೆ.

ಗಣನಾಯಕ ಮತ್ತು ನಾರದರ ಸಂವಾದ ಡುಂಡಿರಾಜರ ಹಾಸ್ಯ ಪ್ರಜ್ಞೆಯನ್ನು ಸೂಚಿಸುತ್ತದೆ. ಲಘುವಾಗಿ ಹೇಳಬೇಕೆಂದರೆ- ಗಣಪತಿ ಸಂಚಾರ ಮಾಡುವಾಗ, SMS ಶೈಲಿಯಲ್ಲಿ -NRN, NRN ಎಂದು ನಾರಾಯಣ ಜಪ ಮಾಡುತ್ತ ಗಿಟಾರ್ ನುಡಿಸುತ್ತ ಸಿಕ್ಕ ನಾರದರು, ಗಣಪನೊಡನೆ ಪ್ರಸ್ತಾಪ ಮಾಡುವುದು - ಬೆಂಗಳೂರಿನ ಟ್ರಾಫಿಕ್ ಜಾಮ್, ಯಡ್ಡಿ ಗಣಪನಿಂದ ವೈಷ್ಣೋದೇವಿಗೆ ಮಾಡಿದ "ದೈವಾಂತರ ", ಸದಾನಂದ ಗೌಡರು ಬೇಡಿದ ಹಾಲು ಮಹಾಮಂಡಲಿಯ ಅಧ್ಯಕ್ಷ ಸ್ಥಾನ ಮತ್ತು ಸಿನಿಮಾ ನಾಯಕಿ ಮಾಧುರಿಯ ಸೌಂದರ್ಯ. ಎಲ್ಲರನ್ನು ಬೋಳಿಸಿ ಹಾಸ್ಯ ಮಾಡುತ್ತಾರೆ - ರಾಜರು!

ಮಾತಿಗೂ ಮುತ್ತಿಗೂ ಇರುವ ಸಂಬಂಧವನ್ನು ತಿಳಿಸುತ್ತ- "ಸಂಗಾತಿ, ತುಟಿಗೆ ತುಟಿಯೊತ್ತಿ, ಉಸುರುವ ಒಂದೊಂದು ಮಾತೂ, ನುಡಿಮುತ್ತು" ಎನ್ನುತ್ತಾರೆ !

ಮತ್ತೆ ರಾಜಕೀಯಕ್ಕೆ ತಿರುಗಿ - ನರೇಂದ್ರ ಜಾಲವನ್ನು ವಿವರಿಸುತ್ತಾರೆ.

"ಸಮೀಕ್ಷೆ ಸುಳ್ಳಾಗಲಿಲ್ಲ, ನಿರೀಕ್ಷೆ ಹುಸಿಯಾಗಲಿಲ್ಲ,
ಮುಗಿಯಿತು ಯುಪಿಎ ಕಾಲ, ಕಾರಣ ನರೇಂದ್ರ ಜಾಲ."

ಗಣೇಶನನ್ನು ಮತ್ತೆ ಹಾಸ್ಯಕ್ಕೆ ಎಳೆದು ಹೇಳುತ್ತಾರೆ -
"ಗಣೇಶ ಮಹೋತ್ಸವದಲ್ಲಿ ಕರೀನಾಳ ನೃತ್ಯ ನೋಡಿ ಕರಿವದನನ ಉದ್ಗಾರ -
ಕರೀನಾ ಕಪೂರ - ಆಹಾ! ಎಷ್ಟು ಸಪೂರ!".

" ದೋಣಿ ಸಾಗಲಿ, ಮುಂದೆ ಹೋಗಲಿ... " ಅಲ್ಲ, ರಾಜರ ಪ್ರಕಾರ -
"ಧೋನಿ ಆಡಲಿ, ಬ್ಯಾಟು ಬೀಸಲಿ, ಚೆಂಡು ಬೌಂಡರಿ ಹಾರಲಿ!!!" ಎಲ್ಲಿಂದ ಎಲ್ಲಿಗೆ ಹಾರಿಸಿದರು! ವಾಹವಾ!
ಇಷ್ಟಲ್ಲದೆ, " out of the box" ಹಾಸ್ಯಗಳನ್ನು ಬರೆದು ,ಕೊನೆಯದಾಗಿ ಸನ್ಮಾನಗಳ ಆಭಾಸದ ಬಗ್ಗೆ ಲೇಖನವನ್ನು ಬರೆದಿದ್ದಾರೆ. ಅದಕ್ಕಂತೂ ರಾಜರಿಗೆ ಸನ್ಮಾನ ಸಲ್ಲಲೇಬೇಕು!

ತಮಗೆ ಸನ್ಮಾನ ಸಿಕ್ಕ ಸಂದರ್ಭವನ್ನು ಕ್ಷೌರ ಮಾಡಿಸುವ ಸಂದರ್ಭಕ್ಕೆ ಹೋಲಿಸುತ್ತ ಓದುಗರಿಗೆ ಕಚಗುಳಿ ಇಡುವ ಡುಂಡಿರಾಜರ ಈ ಪುಸ್ತಕ ಒಳ್ಳೆಯ "Stress Reliever" !!! ■

## ಇ-ಲೋಕದಲ್ಲಿ ನಾವೂ ನೀವೂ... (ಮುಂದುವರೆದುದು)

ಇದರ ಜೊತೆಗೆ ಇತ್ತೀಚಿನ ಚಾಲಕ ರಹಿತ ಕಾರುಗಳ ಅವಿಷ್ಕಾರ, ಮನುಷ್ಯ ಜನಾಂಗವನ್ನು ಇನ್ನೊಂದು ಆಯಾಮದತ್ತ ಕರೆದುಕೊಂಡು ಹೋಗುತ್ತದೆ. ಈಗ ಹೈಬ್ರಿಡ್ ಕಾರುಗಳು ಸರ್ವೇ ಸಾಮಾನ್ಯವಾಗಿರುವಂತೆ ಮುಂದೊಂದು ದಿನ ಚಾಲಕರಹಿತ ಕಾರುಗಳದ್ದೇ ಕಾರುಬಾರು. ಆಗ ಕಾರನ್ನು ಸ್ವತಃ ಚಾಲನೆ ಮಾಡಲು ಅನುಮತಿ ಇರುತ್ತದೋ ಇಲ್ಲವೋ ಅಥವಾ ಸ್ವತಃ ಕಾರು ಚಾಲನೆ ಮಾಡುವುದು ಗತಕಾಲದ ತಂತ್ರಜ್ಞಾನವೆನಿಸಿ, ಅಂತಹ ಕಾರುಗಳ ಉತ್ಪಾದನೆಯೇ ಸ್ಥಗಿತಗೊಳ್ಳಬಹುದು. ಹೀಗೆ ತಂತ್ರಜ್ಞಾನವು ಬಹುಮುಖವಾಗಿ ಶರವೇಗದಲ್ಲಿ ಬೆಳೆಯುತ್ತಾ ನಾವುಗಳು ಸ್ವಂತವಾಗಿ ಮಾಡುವ ಎಷ್ಟೋ ದೈನಂದಿನ ಕೆಲಸಗಳನ್ನು ನುಂಗಿಬಿಡುತ್ತದೆಂಬ ಅನಿಸಿಕೆ. Technology cannibalizing our daily chores!!
ತಂತ್ರಜ್ಞಾನ ಬೆಳೆಯುತ್ತಿರವ ವೇಗವನ್ನು ನೋಡಿದರೆ, ಈಗ ನಾವುಗಳು ಹೇಗೆ ರಜಾ ದಿನಗಳಲ್ಲಿ living history museum ಗಳಿಗೆ ಭೇಟಿ ಮಾಡಿ, ನಮ್ಮ ಹಳೆಯ ಶತಮಾನದ ಜನರು ಹೇಗೆ ವಾಸಿಸುತ್ತಿದ್ದರು, ಯಾವ ತರಹದ ಕೆಲಸಗಳನ್ನು ಹೇಗೆ ಮಾಡುತ್ತಿದ್ದರು, ಸಾಗುವಣೆ ಸೌಕರ್ಯ ಹೇಗಿತ್ತು, ಹೀಗೆ ಹತ್ತು ಹಲವಾರು ಚಟುವಟಿಕೆಗಳನ್ನು ಒಂದೋ ಎರಡು ದಿನ ನೋಡಿ ಅದರ ಅನುಭವವನ್ನು ಪಡೆದು ಬರುತ್ತೇವೆ. ಮುಂದಿನ ಪೀಳಿಗೆಯವರೂ ಕೂಡ ನಮ್ಮ ಶತಮಾನದಲ್ಲಿ ತಂತ್ರಜ್ಞಾನಕ್ಕೆ ಶರಣಾದ ಎಷ್ಟೋ ಚಟುವಟಿಕೆಗಳನ್ನು ಇಂತಹ ಒಂದು living history museumನಲ್ಲಿ ನೋಡುವ ಕಾಲ ಬರಬಹುದು.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಬಹಳಷ್ಟು ಮುಂದುವರೆದಿದ್ದು, ಮನುಷ್ಯನ ದೇಹದಲ್ಲಿ NFC ಆಧಾರಿತ microchip ( NFC enabled microchip implants in humans) ಜೋಡಿಸಿ, ಮನುಷ್ಯನ ದೇಹದಿಂದ ಮಾಹಿತಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ರವಾನಿಸಬಹುದಾಗಿದೆ. ಮನುಷ್ಯನ ಮಿದುಳಿನಲ್ಲಿ NFC enabled chip ಜೋಡಿಸಿ ಮಿದುಳಿನಿಂದ ಹೊರಹೊಮ್ಮುವ ತರಂಗಗಳನ್ನು ಇನ್ನೊಂದು NFC enabled chip ಸಾಧನಕ್ಕೆ ಕಳುಹಿಸಬಹುದು. ಅಬ್ಬಾ! ಹೇಗಿದೆ ನೋಡಿ ಈ ತಂತ್ರಜ್ಞಾನವು ನಮ್ಮ ಮಿದುಳನ್ನೂ ಬಿಟ್ಟಿಲ್ಲ, ಅಲ್ಲೂ ಕೈ ಹಾಕಿದೆ!! ಮುಂದೊಮ್ಮೆ ನಾವು ಇದಕ್ಕೆ ದಾಸನಾಗಿಬಿಡುತ್ತೇವೋ ಏನೋ ಅನಿಸುತ್ತೆ.
ನನ್ನ ಊಹೆಯಲ್ಲಿ ಮುಂದಿನ ಪೀಳಿಗೆಯ ಮನುಷ್ಯರು ಒಬ್ಬರಿಗೊಬ್ಬರು ಬಾಯಿ ಬಿಟ್ಟು ಮಾತನಾಡುವ ಪ್ರಮೇಯವೇ ಇರುವುದಿಲ್ಲವೇನೋ! ಒಬ್ಬ ಮನುಷ್ಯ ಮಾತನಾಡಿ ಹೇಳಬಯಸುವುದೇನೆಂದು ಅವನಲ್ಲಿ ಅಳವಡಿಸಿದ NFC microchip ಗ್ರಹಿಸಿ, ತನ್ನ ಪಕ್ಕ ಕುಳಿತುಕೊಂಡಿರುವ ಇನ್ನೊಬ್ಬನ ಮಿದುಳಿನ chipಗೆ ಸಂದೇಶ ರವಾನಿಸಿ, ಅಲ್ಲಿ ಸಂಸ್ಕರಿಸಿಕೊಂಡು ಮತ್ತೆ ಉತ್ತರವನ್ನು ಪಕ್ಕದವನಿಗೆ ರವಾನಿಸುತ್ತದೆ. ಇವರಿಬ್ಬರ ನಡುವೆ ಏನೂ ಮಾತನಾಡದೆ ವ್ಯವಹಾರ ಮುಗಿದಿರುತ್ತದೆ. ಮುಂದೊಂದು ದಿನ ಹೀಗಾದರೆ ಎಂದು ನೆನೆಸಿಕೊಂಡರೆ ಆಶ್ಚರ್ಯವೂ, ಭಯವೂ ಆಗುತ್ತದೆ ಅಲ್ಲವೇ ?

ಅಂತಹ ಕಾಲಘಟ್ಟದಲ್ಲಿ ಮಾನವ ಕೇವಲ ಮೂಳೆ ಮಾಂಸದ ಹೊದಿಕೆ. ಮತ್ತೆಲ್ಲವೂ ಬರಿ ತಂತ್ರಜ್ಞಾನದ ಅವಲಂಬಿಕೆ. ಆ ತಂತ್ರಜ್ಞಾನವು ಸಡಿಲವಾದರೆ ಅವನೇನೇನೂ ಮಾಡಲಾರ, ತಂತ್ರಜ್ಞಾನದ ದಾಸ!! ಇದ್ದರೂ ಇಲ್ಲದಂತೆ!
Coma ಬಂದಂತೆ, ಅಲ್ಲ E-coma ಬಂದಂತೆ!! ಬರಿ comaದಲ್ಲಿ ದೇಹ ಜಡ, ಬುದ್ಧಿ ಚಲ. E-coma ದಲ್ಲಿ ಬುದ್ಧಿ ಜಡ, ದೇಹ ಚಲ.

ಇ-ತಂತ್ರಜ್ಞಾನದ ಜೊತೆಗಿನ ನಮ್ಮ ಸಂಬಂಧ ಬಿಡಿಸಲಾರದ್ದು, this is like marriage without divorce! ಕೊನೆಯದಾಗಿ ನನಗೆ ಜ್ಞಾಪಕ ಬರುವುದು, ಡಾ. ರಾಜ್ ರವರ ಹುಲಿಯ ಹಾಲಿನ ಮೇವು ಚಿತ್ರದ ಬೆಳದಿಂಗಳಾಗಿ ಬಾ ಹಾಡಿನ ಈ ಸಾಲು " ನೀನಿಲ್ಲವಾದರೆ ನಾ ಹೇಗೆ ಬಾಳಲಿ... ಬೆಳದಿಂಗಳಾಗಿ ಬಾ.." ನಮಗಿಂದು ಈ ಸಾಲು " e ಇಲ್ಲವಾದರೆ ನಾ ಹೇಗೆ ಬಾಳಲಿ..." ಎಂಬುದಾಗಿ ಅನ್ವಯಿಸುತ್ತದೆ. ■


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಪುಟಾಣಿ ಪ್ರಪಂಚ

### ಚಿತ್ತಾರ

ನ್ಯೂ ಜೆರ್ಸಿಯಲ್ಲಿ ವಸಂತ ಋತುವಿನ ಆಗಮನವನ್ನು ಕಾಯುತ್ತಿರುವ ಚಿಣ್ಣರು ಬರೆದ ವರ್ಣಚಿತ್ರಗಳು.


ಶ್ರಿಯಾ ಸಿಂಹ(10 ವರ್ಷ)


ಮಿಹಿರ್ ಸಿಂಹ (6 ವರ್ಷ)


ಕೃತಿ


ಸಾನ್ವಿ ಪ್ರೀತಮ್



ಅನಘಾ ರಾವುತ್ (8 ವರ್ಷ)


ಪ್ರೇರಣಾ(8 ವರ್ಷ)


ಶ್ರೀಯಾ ಕರಣಮ್ (9 ವರ್ಷ)


ಸರಯೂ ಆನಂದ್ (6 ವರ್ಷ)


ಕೃತ್ತಿಕಾ(6 ವರ್ಷ)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ನೀತಿ ಕಥೆ



### ಮೂರು ಮೀನುಗಳು

**ಒಂ**ದು ದೊಡ್ಡ ಕೊಳದಲ್ಲಿ ಮೂರು ಮೀನುಗಳಿದ್ದವು. ಹಲವಾರು ವರ್ಷಗಳಿಂದ ಅದೇ ನೀರಿನಲ್ಲಿ ಒಡನಾಡುತ್ತ ಬೆಳೆದಿದ್ದವು.

ಒಮ್ಮೆ ಅದೇ ಕೊಳದ ಹತ್ತಿರ ಮೀನು ಹಿಡಿಯುವ ಇಬ್ಬರು ಬೆಸ್ತರು " ಈ ಕೊಳದ ತುಂಬಾ ಮೀನುಗಳಿವೆ ,ಇಂದಿನ ಕೆಲಸವನ್ನು ಮುಗಿಸಿ ನಾಳೆ ಬೆಳಿಗ್ಗೆ ಬೇಗ ಬಂದು ಮೀನು ಹಿಡಿಯೋಣ" ಎಂದು ಮಾತನಾಡಿಕೊಳ್ಳುತ್ತಿದ್ದರು.

ಅದನ್ನು ಕೇಳಿದ ಒಂದು ಮೀನು ನಾಳೆ ಬೆಳಗ್ಗೆಯೊಳಗೆ ಈ ಕೊಳದಿಂದ ಹೊರ ಹೋಗಬೇಕು ಎಂದು ನಿರ್ಧರಿಸಿ ತನ್ನ ಸ್ನೇಹಿತರಿಗೆ ವಿಷಯ ತಿಳಿಸಿತು.

ನಾನು ಸಂಸಾರದೊಂದಿಗೆ ಈ ಕೊಳವನ್ನು “ಇಂದು ರಾತ್ರಿಯೇ ಬಿಟ್ಟು ಬೇರೆಡೆಗೆ ಹೋಗುತ್ತೇನೆ. ಇಲ್ಲಿದ್ದರೆ ಸಾವು ನಿಶ್ಚಿತ , ನೀವು ನನ್ನ ಜೊತೆ ಹೊರಡಿ" ಎಂದು ಎಚ್ಚರಿಸಿತು. ಅದನ್ನು ಕೇಳಿದ ಇನ್ನೆರೆಡು ಮೀನು, ಇದೇ ಕೊಳದಲ್ಲಿ ಹಲವಾರು ವರ್ಷಗಳಿಂದ ಇದ್ದೇವೆ. ಇದು ನಾವು ಹುಟ್ಟಿ ಬೆಳೆದ ಜಾಗ. ನಾವು ಎಲ್ಲಿಯೂ ಹೋಗುವುದಿಲ್ಲ. ಇಲ್ಲಿಯೇ ಇರುತ್ತೇವೆ. ಇಲ್ಲಿ ಯಾರು ಬರುವುದಿಲ್ಲ ಎಂದು ಉಡಾಫೆಯ ಮಾತನಾಡಿದವು. ಮಾರನೆ ದಿನ ಬೆಳಗ್ಗೆ ಬೆಸ್ತರು ಬಂದು ಕೊಳದಲ್ಲಿದ್ದ ಮೀನನ್ನೆಲ್ಲ ಹಿಡಿದರು. ಅದರಲ್ಲಿ ಈ ಎರಡು ಮೀನುಗಳು ಸಿಕ್ಕಿಕೊಂಡವು. ಹಿಂದಿನ ದಿನವೇ ಕೊಳದಿಂದ ದೂರ ಹೋಗಿದ್ದ ಮೀನು, ಅಪಾಯ ಕಂಡ ತಕ್ಷಣ ತನ್ನ ಸಮಯಪ್ರಜ್ಞೆ ಮತ್ತು ಚುರುಕುಬುದ್ಧಿಯಿಂದ ಜೀವ ಉಳಿಸಿಕೊಂಡಿತ್ತು.

**ನೀತಿ : ಅಪಾಯ ಕಂಡ ತಕ್ಷಣ ಪ್ರತಿಕ್ರಿಯಿಸಿ**

**-ರಾಘವೇಂದ್ರ ಕುಂದಲಗುರ್ಕಿ, ( ಆಧಾರ : ಪಂಚತಂತ್ರ ಕಥೆಗಳು)**

**ವರ್ಣಚಿತ್ರ :ಅಭಿಜ್ಞ ಭಾರದ್ವಾಜ (8 ವರ್ಷ)**



ಮನ್ವಿತ್ ಮಳಲಿ (61/2 ವರ್ಷ)




ಸಿರಿ ಕೇಶವ (10 ವರ್ಷ)



ಶ್ರಿಯಾ ಕುಮಾರ್(10 ವರ್ಷ)



ರಚನಾ ಆಚಾರ್ಯ (8 ವರ್ಷ)



ಶ್ರೀವತ್ಸ ಕರಣಮ್

## ಚಿತ್ತಾರ

### 'ವಸಂತ ಋತು' - ಚಿಣ್ಣರು ಬರೆದ ವರ್ಣಚಿತ್ರಗಳು



ವೈಭವ್ ಕುಮಾರ(8 ವರ್ಷ)



ಪ್ರಣವ್ ಕುಮಾರ



ಅಮೂಲ್ಯ ಗೌಡ(9 ವರ್ಷ)




ಶ್ರೇಯಾ ರಾಘವೇಂದ್ರ, 6 ವರ್ಷ)



ಐರಾ ನವೀನ (7 ವರ್ಷ)


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ






## ಶ್ರೀಕೃಷ್ಣನಿಗೆ ಸಂಗೀತ ಸೇವೆ

**ಬಿಂದುಮಾಧವಿ . ಪಿ**




**ದೇ**ವರು ತನ್ನ ಇರುವಿಕೆಯನ್ನು ಒಂದಲ್ಲ ಒಂದು ರೀತಿಯಲ್ಲಿ ನಮಗೆ ಮನದಟ್ಟು ಮಾಡುತ್ತಲೇ ಇರುತ್ತಾನೆ. ಮೊನ್ನೆ ಫೆಬ್ರುವರಿ ೧೩ರಂದು ಶ್ರೀಕೃಷ್ಣವೃಂದಾವನದ ಸಂಗೀತೋತ್ಸವದಲ್ಲಿ ಪಾಲ್ಗೊಳ್ಳುವ ಅವಕಾಶ ನಮ್ಮ ಕುಟುಂಬದ ಮೂವರಿಗೂ ಬಂದೊದಗಿದಾಗ ನನಗೆ ಅನ್ನಿಸಿದ್ದು ಇದು ದೇವರ ಅನುಗ್ರಹವಲ್ಲದೆ ಇನ್ನೇನು ಎಂದು. ಪ್ರತಿ ವರುಷ ಶ್ರೀ ಪುರಂದರ ದಾಸರ ಆರಾಧಾನೆಯ ಅಂಗವಾಗಿ ಆಯೋಜಿಸುವ ಕಾರ್ಯಕ್ರಮವೇ ದಿನವಿಡೀ ನಡೆಯುವ ಈ ಸಂಗೀತ ಸೇವೆ.

ಸ್ನೇಹಿತೆಯಿಂದ ಕರೆ ಬಂದಾಗ, ನನ್ನ ಒಪ್ಪಿಗೆ ತಿಳಿಸಿದ್ದೆ. ಆಗ ನನಗೆ ಈ ಸಂಗೀತೋತ್ಸವದ ಪೂರ್ತಿ ವಿವರಗಳು ತಿಳಿದಿರಲಿಲ್ಲ. ತಿಳಿದಿದ್ದರೆ ಬಹುಶಃ ಹಾಡುವ ಧೈರ್ಯ ಮಾಡುತ್ತಿರಲಿಲ್ಲ. ಸರಿ ನನಗೆ ಹಾಡುಗಳನ್ನು ಕಳುಹಿಸಿದಳು, ಅಭ್ಯಾಸ ಮಾಡಿದೆವು. ಸ್ನೇಹಿತರೆಲ್ಲರೂ ಜೊತೆಗೂಡಿದೆವು. ಎಲ್ಲರೂ ಕುಳಿತು ದೇವರನಾಮಗಳನ್ನು ಅಭ್ಯಾಸ ಮಾಡುವಾಗ ಅದರಲ್ಲೇ ಒಂದು ವಿಧದ ತೃಪ್ತಿ, ಭಕ್ತಿ, ಭಾವಗಳು ತುಂಬಿ ಬರುತ್ತವೆ. ಒಂದೊಂದು ತಂಡಕ್ಕೆ ೧೫ ನಿಮಿಷಗಳನ್ನು ನೀಡಲಾಗಿತ್ತು. ಕಾರ್ಯಕ್ರಮಗಳ ಪಟ್ಟಿ ಬಂದಾಗ ನೋಡಿದರೆ ೩೬ ತಂಡಗಳು. ಮುಂಜಾನೆ ೮ ರಿಂದ ರಾತ್ರಿ ೮ ರವರೆಗೆ ಶ್ರೀ ಕೃಷ್ಣನಿಗೆ ಸೇವೆ.

ನಮ್ಮ ತಂಡದ ಸಮಯ ಬೆಳಿಗ್ಗೆ ೧೦.೫೦ಕ್ಕೆ ಎಂದಿತ್ತು.ವೇದಿಕೆಯ ಮೇಲೆ ಹೋಗುವುದಕ್ಕೆ ಮುನ್ನ ನಮ್ಮನ್ನು ಶ್ರೀ ಕೃಷ್ಣನ ಸನ್ನಿಧಾನಕ್ಕೆ ಕರೆದೊಯ್ದು, ಗಣಪತಿಯ ಮುಂದೆ ಮೊದಲು ಸಂಕಲ್ಪ ಮಾಡಿಸಿ, ಭಗವಂತನಿಗೆ ನನ್ನ ಶಕ್ತ್ಯಾನುಸಾರ ಸಂಗೀತ ಸೇವೆಯನ್ನು ಮಾಡುತ್ತೇನೆ ಸ್ವೀಕರಿಸು ಎಂದು ನಮಸ್ಕರಿಸಿ, ನಂತರ ವೇದಿಕೆಯ ಮೇಲೆ ಕುಳಿತು ಸಂಗೀತ ಸೇವೆಯನ್ನು ಅರ್ಪಿಸುವುದು. ನಂತರ ಮತ್ತೆ ಶ್ರೀ ಕೃಷ್ಣನ ಸನ್ನಿಧಾನದಲ್ಲಿ ಕೃಷ್ಣಾರ್ಪಣ ಮಾಡುವುದು. ಅರ್ಚಕರು ನಮ್ಮ ಪ್ರಮಾಣ ಪತ್ರಗಳನ್ನು ನೀಡಿದರು.ಪ್ರಸಾದ ಸ್ವೀಕರಿಸಿ ಧನ್ಯತೆಯಲ್ಲಿ ಮನೆಗೆ ಹಿಂತಿರುಗಿದೆವು.

ಈ ಸಂಗೀತ ಸೇವೆಯ ಕಾರ್ಯಕ್ರಮ,ಪೂಜೆ,ಶಂಖ ,ಮದ್ದಳೆ , ಘಂಟೆಯ ನಾದಗಳು ನನಗೆ ಚಿಕ್ಕಂದಿನಲ್ಲಿ ಮಲೆನಾಡಿನ ನನ್ನ ಅಜ್ಜನ ಊರಿನಲ್ಲಿ ನಡೆಯುತ್ತಿದ್ದ ಪೂಜೆಗಳನ್ನು ನೆನಪಿಗೆ ತಂದವು. ಈ ರೀತಿ ಮುಂಜಾನೆಯಿಂದ ಸಂಜೆಯವರೆಗೆ ಸೇವೆ ಸಲ್ಲಿಸಲು ಇಷ್ಟೊಂದು ತಂಡಗಳು ನಮ್ಮ ನ್ಯೂ- ಜೆರ್ಸಿಯನ್ನು ಬಿಟ್ಟು ಅಮೆರಿಕಾದ ಬೇರೆ ರಾಜ್ಯಗಳಲ್ಲಿ ದೊರಕುವುದಿಲ್ಲ ಎಂದು ತಿಳಿದಾಗ ಒಂದು ರೀತಿ ಹೆಮ್ಮೆಯ ವಿಚಾರವೆನ್ನಿಸಿತು.ತಾಯ್ನಾಡಿನಿಂದ ದೂರವಿದ್ದರೂ, ನಮ್ಮ ಸಂಸ್ಕೃತಿಯನ್ನು ನಮ್ಮ ಮಕ್ಕಳಿಗೆ ಪರಿಚಯಿಸುವಲ್ಲಿ ಇದೊಂದು ಒಳ್ಳೆಯ ಪ್ರಯತ್ನವೆನ್ನಿಸಿತು. ಸದ್ಯದಲ್ಲೇ ನೃತ್ಯೋತ್ಸವ ಕಾರ್ಯಕ್ರಮವಿರುವ ಬಗ್ಗೆ ತಿಳಿದು, ನಮ್ಮ ನೃತ್ಯ ತಂಡವನ್ನು ಅಣಿ ಮಾಡುವ ಯೋಚನೆ ಮೂಡಿತು.

## ಅಂತರರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು.

**(ಮಾರ್ಚ್ 8 , ಅಂತರರಾಷ್ಟ್ರೀಯ ಮಹಿಳಾ ದಿನ)**



## ಮನೆ ಮದ್ದು

**ಬಿಕ್ಕಳಿಕೆ ನಿಲ್ಲಿಸಲು :**

1/4 ಅಥವಾ1/2 ಟೀ ಚಮಚೆ ಸಕ್ಕರೆಯನ್ನು ,3-4 ತುಳಸಿ ಎಲೆಗಳೊಂದಿಗೆ ಚೆನ್ನಾಗಿ ಅಗಿದು ರಸ ನುಂಗಿದರೆ ಸತತವಾಗಿ ಬರುತ್ತಿರುವ ಬಿಕ್ಕಳಿಕೆ ನಿಲ್ಲುತ್ತದೆ.

**-ಚೇತನಾ ಹೆಗಡೆ** (ಮುಂಬಯಿ)

## ಸವಿರುಚಿ

## ಚೀರಿಯೋಸ್ ಲಡ್ಡು



**ಉಷಾ ಸ್ವಾಮಿ**

ಬೇಕಾಗುವ ಸಾಮಗ್ರಿಗಳು:

1 ಕಪ್ ಹನಿನಟ್ ಚೀರಿಯೋಸ್
1/2 ಕಪ್ ಜೇನುತುಪ್ಪ
1/2 ಕಪ್ ತುರಿದ ಕೊಬ್ಬರಿ
1ಚಿಟುಕೆ ಏಲಕ್ಕಿ
1 ಚಮಚ ತುಪ್ಪ

ವಿಧಾನ:

ಹನಿನಟ್ ಚೀರಿಯೋಸನ್ನು ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಿ. ಕೊಬ್ಬರಿ ತುರಿಯನ್ನು ಸ್ವಲ್ಪ ಬೆಚ್ಚಗೆ ಹುರಿದು ಇಟ್ಟುಕೊಳ್ಳಿ. ಒಂದು ಪಾತ್ರೆಯಲ್ಲಿ ಚೀರಿಯೋಸ್ ಪುಡಿ,ಕೊಬ್ಬರಿ ತುರಿ ಹಾಗು ಏಲಕ್ಕಿ ಪುಡಿಯನ್ನು ಬೆರಸಿ. ನಂತರ ಅದಕ್ಕೆ ಜೇನು ತುಪ್ಪ ವನ್ನು ಹಾಕಿ ಕಲಸಿ.ಕೈಗೆ ಸ್ವಲ್ಪ ತುಪ್ಪವನ್ನು ಸವರಿಕೊಂಡು ಉಂಡೆಗಳನ್ನು ಕಟ್ಟಿ. ಈಗ ರುಚಿ ರುಚಿಯಾದ ಚೀರಿಯೋಸ್ ಲಡ್ಡು ತಿನ್ನಲು ಸಿದ್ಧ.






Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ಸುಂದರ ಸಂಪ್ರದಾಯ

### ರಂಗೋಲಿ ಕಲೆ



ದೀಪ್ತಿ ಗಡ್






## ಕವನ

### ಹೆಜ್ಜೆ... . . . . .



ಲಕ್ಷ್ಮಿ ಕೊಲಾಲ



**ಚಿ**ಕ್ಕ ಪುಟ್ಟ ಹೆಜ್ಜೆಯಿಟ್ಟು ನಡೆದ ಕಾಲ ಸುಂದರ..
ಆ ತಪ್ಪು ಹೆಜ್ಜೆಗಳಲಿ ಪುಟಿದ ಸಂತಸವು ಮಧುರ..!

ಹದಿಹರೆಯದ ಆ ಹೆಜ್ಜೆಗಳಲಿ..
ಉಲಿದ ನಾದವು ಚಂದ..
ತಪ್ಪಿದ ಆ ಹೆಜ್ಜೆಯ ನಾದದ.
ಉತ್ತರವಾಗಬಹುದು ಹಲವು ಪ್ರಮಾದ!

ಈ ಬದುಕಿನ ಪ್ರತಿ ಹೆಜ್ಜೆಯೂ..
ನುಡಿವುದೊಂದು ಮೇಳ-ವಾದ್ಯ...
ಆ ತಪ್ಪಿದ ಒಂದೊಂದು ಹೆಜ್ಜೆಯಲಿ...
ಮೂಡಲಿ ಮಧುರ ಬಾಂಧವ್ಯ...
ನಮ್ಮೆಲ್ಲರ ಸಂತಸ ಧೈರ್ಯ -ಸ್ಥೈರ್ಯ ...
ಈ ಜೀವನಕೀಗ ಅನಿವಾರ್ಯ...!!

(ಚಿತ್ರ: ಕು.ಅಭೀಷ್ಟಾ ತಂತ್ರಿ)

## ಪ್ರತಿಭೆ



### ಕೀರ್ತಿ ಭಟ್ಟ

ಕುಮಾರಿ ಕೀರ್ತಿ ಭಟ್ಟ, ಪೆನ್ನಿಂಗ್ಟನ್ ,ನ್ಯೂ ಜೆರ್ಸಿಯ ಸೆಂಟ್ರಲ್ ಹೈಸ್ಕೂಲ್ ನಲ್ಲಿ ಓಂಬತ್ತನೇ ತರಗತಿಯಲ್ಲಿ ಓದುತ್ತಿದ್ದಾಳೆ. ಕರ್ನಾಟಕ ಶಾಸ್ತ್ರೀಯ ಸಂಗೀತ ಇವಳ ನೆಚ್ಚಿನ ವಿಷಯ. ತನ್ನ ಗುರುಗಳಾದ ಶ್ರೀ ರಾಜೇಂದ್ರ ಭೆಂಡೆ ಅವರಿಂದ ಆರು ವರ್ಷಗಳಿಂದ ಸ್ಕೈಪಿನಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡುತ್ತಿದ್ದಾಳೆ. ಕೀರ್ತಿಯ ಈ ಸಂಗೀತಾಸಕ್ತಿಯೇ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಂಗೀತ-ಜೂನಿಯರ್ ಪರೀಕ್ಷೆಗೆ, ನ್ಯೂ ಜೆರ್ಸಿಯಿಂದ ಬೆಂಗಳೂರಿಗೆ ಒಬ್ಬಳೇ ಪ್ರಯಾಣ ಬೆಳೆಸಿ , ಪರೀಕ್ಷೆಯಲ್ಲಿ ಪಾಲ್ಗೊಂಡು ಬರುವಂತೆ ಮಾಡಿತು. ಈಗ ಫಲಿತಾಂಶ ಪ್ರಕಟವಾಗಿದ್ದು, ಇವಳು ಡಿಸ್ಟಿಂಗ್ಷನ್ ಅಂಕ ಗಳಿಸಿ ತೇರ್ಗಡೆ ಹೊಂದಿದ್ದಾಳೆ. ಪರೀಕ್ಷೆ ಕ್ಲಿಷ್ಟವಾಗಿದ್ದರೂ ನಿರಂತರ ಅಭ್ಯಾಸ ತನ್ನ ಸಹಾಯಕ್ಕೆ ಬಂದದ್ದು ಖುಷಿ ಕೊಟ್ಟಿದೆ ಎನ್ನುವ ಕೀರ್ತಿ, ೬ ವರ್ಷದಿಂದ ಭರತನಾಟ್ಯವನ್ನು ಗುರು ಬಾಲದೇವಿ ಚಂದ್ರಶೇಖರರಿಂದ ಅಭ್ಯಾಸ ಮಾಡುತ್ತಿದ್ದಾಳೆ. ಇದಲ್ಲದೇ ತನ್ನ ಶಾಲೆಯ ಕ್ವೈರ್ ತಂಡ ಹಾಗೂ ವಾಲಿಬಾಲ್ ಆಟಗಳಲ್ಲಿ ಭಾಗವಹಿಸುತ್ತಿದ್ದಾಳೆ. ಏಫ್.ಬಿ.ಏಲ್.ಏ ಕ್ಲಬ್ಬಿನಲ್ಲಿ ಜವಾಬ್ದಾರಿಯುತ ಕೆಲಸವನ್ನು ಮಾಡುತ್ತಿದ್ದಾಳೆ. ಸಯಿನ್ಸ್ ಒಲಂಪಿಯಾಡ್ ಕ್ಲಬ್ಬಿನಲ್ಲಿ ಬಹಳ ಆಸಕ್ತಿಯಿಂದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನೂ ಗೆದ್ದಿದ್ದಾಳೆ.

ಬಿಡುವಿನ ಸಮಯವನ್ನು ಸ್ನೇಹಿತರ ಜೊತೆ ಟ್ರೆಕ್ಕಿಂಗ್ ಮತ್ತು ಕ್ಯಾಂಪಿಂಗಳಲ್ಲಿ ಕಳೆಯಲು ಇಷ್ಟಪಡುವ ಕೀರ್ತಿ, ನ್ಯೂಜೆರ್ಸಿಯ ಶ್ರೀಮತಿ ಉಷಾ ಮತ್ತು ಸ್ವಾಮಿ ಭಟ್ಟರ ಪುತ್ರಿ. ಈ ದಿಟ್ಟ, ಪ್ರತಿಭಾವಂತ ಕನ್ನಡದ ಹುಡುಗಿಗೆ 'ಬೃಂದಾವನ ವಾಣಿ'ಯ ಪರವಾಗಿ ಶುಭ ಹಾರೈಕೆಗಳು.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಸಹಾಯ ಹಸ್ತ



### ಹೆಮ್ಮೆಯ ಕನ್ನಡ ವೀರ ಪುತ್ರರಿಗೆ ಕಟ್ಟೆ ಬಾಯ್ಸ್ ತಂಡದ ಅಳಿಲು ಸೇವೆ

ಸಂತೋಷಕುಮಾರ್ ಕಡ್ಲೆಬೇಳೆ

ಸಿಯಾಚಿನ್ ಗಡಿಯ ಹಿಮಪಾತದಲ್ಲಿ ವೀರ ಮರಣವನ್ನಪ್ಪಿದ ನಮ್ಮ ಕನ್ನಡ ನಾಡಿನ ಹೆಮ್ಮೆಯ ವೀರ ಕುವರರಾದ ಧಾರವಾಡ ಜಿಲ್ಲೆಯ ಹನುಮಂತಪ್ಪ ಕೊಪ್ಪದ, ಹಾಸನ ಜಿಲ್ಲೆಯ ನಾಗೇಶ್







ಮತ್ತು ಹೆಚ್ ಡಿ ಕೋಟೆಯ ಮಹೇಶ್ ಅವರ ಕುಟುಂಬಗಳಿಗೆ ನ್ಯೂ ಜೆರ್ಸಿ ಕಟ್ಟೆ ಬಾಯ್ಸ್ ಆರ್ಥಿಕ ನೆರವಿನ ಸಹಾಯ ಹಸ್ತ ಚಾಚಿ ಹೃದಯ ಶ್ರೀಮಂತಿಕೆ ಮೆರೆದಿದ್ದಾರೆ.



(ಚೆಕ್ ನೀಡುತ್ತಿರುವ ಕಟ್ಟೆ ಬಾಯ್ಸ್ ಸದಸ್ಯ ಸೃಜನ್ ಗೌಡ)

ಕೋಟಿ ಕೋಟಿ ಜನರ ಹಿತಕ್ಕಾಗಿ ತಮ್ಮ ಜೀವವನ್ನೇ ಪಣಕ್ಕಿಟ್ಟು, ರುದ್ರ ಭೀಕರ ಹಿಮ ಪ್ರದೇಶದ ಗಡಿಯಲ್ಲಿ ಹಗಲಿರುಳು ಎನ್ನದೆ ತಾಯ್ನಾಡನ್ನು ಕಾಯುತ್ತಿದ್ದ ಕನ್ನಡ ನಾಡಿನ ಹೆಮ್ಮೆಯ ವೀರ ಯೋಧರು ಹಿಮಪಾತದಲ್ಲಿ ವೀರ ಮರಣವನ್ನಪ್ಪಿ ನಮ್ಮನ್ನಗಲಿರುವುದು ಅಕ್ಷರಗಳಲ್ಲಿ ಹೇಳಲಾಗದ ನೋವು ಮತ್ತು ನಮ್ಮ ದುರ್ದೈವ, ನಿಜಕ್ಕೂ ಭರಿಸಲಾರದ ನಷ್ಟ.



(ವೀರಯೋಧ ಹನುಮಂತಪ್ಪ ಅವರ ಕುಟುಂಬ)

ನಮಗೋಸ್ಕರ ತಮ್ಮ ಜೀವ ತೆತ್ತ ಈ ಯೋಧರಿಗೆ ನಮ್ಮ ಜನ್ಮದಲ್ಲಿಯೇ ಋಣ ತೀರುಸುವುದು ಅಸಾಧ್ಯದ ಮಾತೆಂದು ತಿಳಿಸಿದ ಕಟ್ಟೆ ಹುಡುಗರು, ಕೇವಲ ಅಳಿಲು ಸೇವೆಯಂತೆ ಅವರ ಕಿರುಕಾಣಿಕೆಯಾಗಿ ತಲಾ ರೂ ೧ ಲಕ್ಷ ವನ್ನು ವಿನಮ್ರತೆಯಿಂದ ಯೋಧರ ಕುಟುಂಬಕ್ಕೆ ತಲುಪಿಸಿ ಎಲ್ಲರಿಗೂ ಮಾದರಿಯಾಗಿದ್ದಾರೆ. ಈ ನೋವಿಗೆ ಸ್ಪಂದಿಸುವ ಪ್ರತಿ ಹೃದಯದಿಂದ ಅಗಲಿದ ಯೋಧರಿಗೊಂದು ಗೌರವ ನಮನ. ■

### ಹೃದಯ ಸಂಜೀವಿನಿ

ಇಂದೆನ್ನ ಹೃದಯ ದೇಗುಲದಿ,

ಅಪಧಮನಿ-ಅಭಿಧಮನಿ |

ಗರ್ಭ ಗುಡಿಯೊಳಗೆ ,

ಹುಟ್ಟಿರದ ಸಾವಾಗಿ , ಸಾವಿರದ ಹುಟ್ಟಾಗಿ |

ನೆಲೆ ನಿಂತ ಎನ್ನೊಲವಿನ ಜೀವಸುಧೆಗೆ ,

ಹೃದಯ ಸಂಜೀವಿನಿ ಎಂದು ಹೆಸರಿಡಲೆ ?

ಹೃದಯ ಸಂಜೀವಿನಿ ಎಂದು ಹೆಸರಿಡಲೆ. . . .

- ಸುನಿಲ್ ಕೇಸರಿ (ಬೆಂಗಳೂರು)

## ಕ್ಯಾಮೆರಾ ಕಣ್ಣಿಂದ....



### ಹಿಮ ಮತ್ತು ಹಕ್ಕಿ !!!!

ಶೈಲೇಶ್ ಉಪ್ಪಿನ








Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಹಾಗೆ ಸುಮ್ಮನೆ. . . .

### ಪ್ರೇಮಿಗಳ ದಿನ , ಪ್ರೇಮ ನಿವೇದನೆ . . . .

ಫೋನ್ ಮಾಡಿ ಸತಾಯಿಸುವುದಲ್ಲ ನನ್ನ ಜಾಯಮಾನ ,
ಬಿಟ್ಟು ಬಿಡು ನಿನ್ನ ಈ ಒಣ ಬಿಗುಮಾನ |
ಬೇಡ ಎಂದರೆ ಹೇಳಿ ಬಿಡು ನನಗೇನು ಬೇಜಾರಿಲ್ಲ ,
ನನ್ನ ನಂಬರ್ ನಿನ್ನ ಗೆಳತಿಗೆ ಕೊಡು ಅದರಲ್ಲಿ ನನ್ನ ತಕರಾರಿಲ್ಲ |

ನಾ ಬರೆದಿದ್ದೆಲ್ಲ ಅಲ್ಲ ಕೃತಕ ,
ಇದು ನನ್ನ ಮನಸಿನಲ್ಲಿ ಮೂಡಿದ ರೂಪಕ |
ನಿನಗೆ ತಿಳಿಯದಿದ್ದರೆ ಇದು ನಿರರ್ಥಕ
ನೀ ಆದರೆ ನನ್ನ ಗೆಳತಿ ಈ ಬಾಳು ಸಾರ್ಥಕ |

- **ದೀಪಕ್ ನಾಯ್ಕ ಕ್ಷತ್ರಿಯ (ಕುಮಟಾ, ಕರ್ನಾಟಕ)**



ಅಧರದ ಆಧಾರಕೆ ನಿನ್ನ ಪ್ರೇಮವೇ ಲೇಪನಾ
ಕಣ್ಣಿನ ಮಿಂಚಿಗೆ ನಿನ್ನ ಪ್ರತಿಬಿಂಬವೇ ಕಾರಣಾ...
ಇನಿಯ ನನ್ನ ಪ್ರೀತಿಯಾ ಪರಿಧಿ ಮೀರಿದೆ ಪ್ರತಿಕ್ಷಣಾ.

ಆರಂಭವೆ ಅನುದಿನವೂ ಈ ಪಯಣಕೆ...
ನಿನ್ನ ಹೃದಯವೇ ಕೊನೆಯ ತಾಣ ಈ ಪಯಣದಾ ಅಂತ್ಯಕೆ..!

ಪ್ರೀತಿಯ ಆ ನಾಟಕಕೆ ಪರದೆಯು ಶಾಶ್ವತಾ..
ತಪಸ್ಸಲಿ ನಿನ್ನ ಮನವನರಸುತಾ..ಆರಾಧಿಸುತ
ಕಳೆವಾ ದಿನಗಳೂ ಸುಂದರಾ ಅತಿ ಮಧುರಾ ಓ ಇನಿಯಾ ಅಮರಾ..!!

- **ಲಕ್ಷ್ಮಿ ಕೊಲಾಲ**

ಓ ಸಂಗಾತಿ, ನಿನ್ನ ಕಂಡ ಮೊದಲ ದಿನ,
ಅಂತರಾಳದಲ್ಲಿ ಮೂಡಿತೊಂದು ಕಂಪನ |
ಹೃದಯ ವೀಣೆ ಮೀಟಿದೆ ಗಾನ,
ನನಗಷ್ಟೇ ಕೇಳಿಸುತ್ತಿದೆ ಆ ಅನುರಣನ |
ಬೇಡವೆನಿಸಿದೆ ಇನ್ನು ಈ ಮೌನ ,
ಬರೆದೆ ನಿನಗಾಗಿ ಪ್ರೇಮ ನಿವೇದನ |
ಬಾಳ ಪಯಣದಲ್ಲಿ ಜೊತೆಯಾಗುವೆಯಾ?
ಈ ಪ್ರೇಮವ ಸ್ವೀಕರಿಸೆಯಾ ?
ಹಂಚಿಕೊಳ್ಳೋಣ ಜೀವನದ ಬೆಲ್ಲ-ಬೇವು,
ನಾನು-ನೀನು ಒಂದಾಗಿ ಎನಿಸೋಣ 'ನಾವು'|


- **ಸರಿತಾ ನವಲಿ**

## ಕನ್ನಡ ಕೂಟದ ಮುಂಬರುವ ಚಟುವಟಿಕೆಗಳು




## ನಾವು ನೋಡಿದ ಸಿನೆಮಾ





Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಓದುಗರ ಓಲೆಗಳು

ಎಲ್ಲೋ ಹುಟ್ಟಿ , ಮತ್ತೆಲ್ಲೋ ಹರಿವ ಜಲಧಾರೆಯಂತೆ , ಕನ್ನಡದ ಕಂಪನ್ನು ದೂರದೂರಿನಲಿ ಪಸರಿಸುತಿಹ ಬೃಂದಾವನ ವಾಣಿ ತಂಡದ ಕೆಲಸ ಅತ್ಯಂತ ಶ್ಲಾಘನೀಯ. ಬೃಂದಾವನ ವಾಣಿ ಪತ್ರಿಕೆಯ ಎಲ್ಲ ಅಂಕಣಗಳೂ ಬಹಳ ಸುಂದರವಾಗಿ ಮೂಡಿ ಬರುತ್ತಿವೆ. ಕಡಲಾಚೆಯ ಕನ್ನಡಿಗರ ಸಾಹಿತ್ಯಾಸಕ್ತಿ ಅದ್ಭುತವಾಗಿದೆ.

ಎರಡನೇ ಸಂಚಿಕೆಯಲ್ಲಿ ಬಹಳ ಸುಂದರವಾಗಿ ಪ್ರಕಟವಾದ ಮುಖಪುಟ ಚಿತ್ರ 'ಮೈಸೂರಿನ ಕೆ.ಆರ್.ವೃತ್ತ ಮತ್ತು ಅರಮನೆ ದ್ವಾರ ' ,ಎಂದೂ ಮಾಸದ ಮೈಸೂರಿನ ನೆನಪನ್ನು ಕಣ್ಮುಂದೆ ತಂದಿದೆ.

**"ಎಳೆಯ ತರು ದಿನದಿನವು ಹೊಸ ತಳಿರ ತಳೆವಂತೆ | ತಿಳಿನೀರು ಚಿಲುಮೆಯಲಿ ನಿಲದುಕ್ಕುವಂತೆ ||"**

ಎಂಬ ಮಂಕುತಿಮ್ಮನ ಕಗ್ಗದ ಎರಡು ಸಾಲುಗಳ ಹಾಗೆ, ಮುಂಬರುವ ದಿನಗಳಲ್ಲಿ , ಬೃಂದಾವನ ವಾಣಿಯ ಸಂಪಾದಕ ಮಂಡಳಿ ಮತ್ತು ಲೇಖಕರ ಬಳಗದ ಆಸಕ್ತಿ ,ಉತ್ಸಾಹ ಇಮ್ಮಡಿಯಾಗಿ , ಮುಮ್ಮಡಿಯಾಗಿ. . . .ನೂರುಮಡಿಯಾಗಿ ಬೆಳೆದು , ಪತ್ರಿಕೆಯು ಹೆಚ್ಚು , ಹೆಚ್ಚು ಎತ್ತರಕ್ಕೆ ಬೆಳೆಯಲಿ ಎಂದು ಆಶಿಸುತ್ತೇನೆ.

**ಸುಸ್ಮಿತಾ ಜೋಷಿ (ಬೆಂಗಳೂರು)**

ಬೃಂದಾವನ ವಾಣಿಯ ಎರಡನೇ ಸಂಚಿಕೆ ತುಂಬಾ ಚೆನ್ನಾಗಿ ಮೂಡಿ ಬಂದಿದೆ.ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.

**ವಿ.ಪ್ರಸನ್ನಕುಮಾರ್ (ನ್ಯೂ ಜೆರ್ಸಿ)**

ಸಂಚಿಕೆ ತುಂಬಾ ಚೆನ್ನಾಗಿ ಮೂಡಿ ಬಂದಿದೆ.ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.

**ಉಷಾ ಸ್ವಾಮಿ (ನ್ಯೂ ಜೆರ್ಸಿ)**

ಬೃಂದಾವನ ವಾಣಿಯ ಎರಡನೇ ಸಂಚಿಕೆ ತುಂಬಾ ಅಚ್ಚುಕಟ್ಟಾಗಿ ಮೂಡಿ ಬಂದಿದೆ. ಸಂಪಾದಕ ವರ್ಗದವರಿಗೆ ಅಭಿನಂದನೆಗಳು.

**ಭಾಸ್ಕರ ತೈಲಗೇರಿ (ನ್ಯೂ ಜೆರ್ಸಿ)**

ಬೃಂದಾವನ ವಾಣಿ ಸಂಪಾದಕ ಮಂಡಳಿಗೆ ಅಭಿನಂದನೆಗಳು. ನಿಮ್ಮ ಕಾರ್ಯ ವೈಖರಿ ಉತ್ತಮವಾಗಿದೆ.

**ಸಂತೋಷಕುಮಾರ್ ಕಡ್ಲೆಬೇಳೆ (ನ್ಯೂ ಜೆರ್ಸಿ)**

ಅಭಿನಂದನೆಗಳು ಬೃಂದಾವನ ವಾಣಿಯ ಸಂಪಾದಕೀಯ ತಂಡಕ್ಕೆ.

ನಿಮ್ಮ ಮೊದಲ ಎರಡು ಸಂಚಿಕೆಗಳು , ಒಂದು ಮೊಗ್ಗು ಹೂವಾಗಿ ಅರಳಿ ಸುಗಂಧವನ್ನು ಎಲ್ಲೆಡೆ ಹರಡಿದಂತಿವೆ.

ಮುಖಪುಟ ವಿನ್ಯಾಸ , ವಿಷಯಗಳು, ಭಾವಚಿತ್ರಗಳು – ಎಲ್ಲವೂ ಅದರ ಹಿಂದೆ ಇರುವ ಸಂಪಾದಕರ ಪರಿಶ್ರಮವನ್ನು ತೋರಿಸುತ್ತದೆ. ಮತ್ತು ಎಲ್ಲ ವಯಸ್ಸಿನ ಕನ್ನಡಿಗರಿಗೂ ಓದಲು ಖುಷಿ ಕೊಡುತ್ತದೆ.

ನಿಮ್ಮ ಮುಂಬರುವ ಸಂಚಿಕೆಗಳನ್ನು ನಿರೀಕ್ಷೆಯಿಂದ ಕಾಯುವಂತೆ ಮಾಡಿದೆ. ತಂಡದ ಎಲ್ಲ ಸದಸ್ಯರಿಗೂ ಅಭಿನಂದನೆಗಳು.

**-ಚೇತನಾ ಹೆಗಡೆ (ಮುಂಬಯಿ)**

ಸರಿತಾ ನವಲಿಯವರು ಕಳುಹಿಸಿದ ಬೃಂದಾವನ ವಾಣಿ ಸಂಚಿಕೆಯನ್ನು ಒಂದೇ ಪದದಲ್ಲಿ ವರ್ಣಿಸುವದಾದರೆ ' ಸಂಪೂರ್ಣ ' ಎನ್ನಬಹುದು. ಒಂದು ಪತ್ರಿಕೆಯಲ್ಲಿ ಇರಬಹುದಾದ ಎಲ್ಲ ಅಂಶಗಳು ಅದರಲ್ಲಿ ಮೇಳೈಸಿದೆ. ಪ್ರಸನ್ನ ಕುಮಾರ್ ಅವರ ಅನುಭವ ಕಥನದ ನಿರೂಪಣೆ ಅದ್ಭುತವಾಗಿದೆ. ಅಹೀಶ್ ಹಾಗೂ ಸರಿತಾರವರ ಕವನ , ಭಾಸ್ಕರ್ ರವರ ಕವಿನಮನ ಹಾಗು ಪುಸ್ತಕ ಪರಿಚಯ ಎಲ್ಲವೂ ಸೊಗಸಾಗಿದೆ. ನನಗೆ ಪತ್ರಿಕೆ ಹೊರತರುವ ಕಷ್ಟ ಗೊತ್ತು. ಪ್ರತಿಯೊಂದು ಸಂಚಿಕೆಯೂ ಒಂದು ಹೆರಿಗೆಯಂತೆ. ಸಂಪಾದಕ ತಂಡದ ಸಂಯಮ ಹಾಗೂ ಸ್ಫೂರ್ತಿಯನ್ನು ಒರೆಗೆ ಹಚ್ಚುತ್ತದೆ. ನಿಮಗೆಲ್ಲರಿಗೂ ಅಭಿನಂದನೆಗಳು ಮತ್ತು ಉಗಾದಿ ಹಬ್ಬದ ಶುಭಾಶಯಗಳು.

**ಬಿ. ಸಂಜಯ( ಬೆಂಗಳೂರು)**

'ಬೃಂದಾವನ ವಾಣಿ ' ಯನ್ನು ಮೆಚ್ಚಿದ ಮತ್ತು ಮಿಂಚಂಚೆ ಕಳುಹಿಸಿದ ಎಲ್ಲರಿಗೂ ಧನ್ಯವಾದಗಳು. ನಿಮ್ಮ ಅನಿಸಿಕೆ ಮತ್ತು ಸಲಹೆಗಳು ಮುಂಬರುವ ವಾಣಿಯ ಸಂಚಿಕೆಗಳನ್ನು ಇನ್ನೂ ಅಚ್ಚುಕಟ್ಟಾಗಿ ಪ್ರಕಟಿಸುವಲ್ಲಿ ಸಹಾಯವಾಗುತ್ತವೆ.
ಕಾರಣಾಂತರಗಳಿಂದ ಈ ಸಂಚಿಕೆಯಲ್ಲಿ "ಯುವವಾಣಿ" ಅಂಕಣವನ್ನು ಪ್ರಕಟಿಸಲಾಗಿಲ್ಲ. ಇದಕ್ಕಾಗಿ ವಿಷಾದಿಸುತ್ತೇವೆ.
**-ಬೃಂದಾವನ ವಾಣಿ ಸಂಪಾದಕ ಮಂಡಳಿ**

## ಸದಸ್ಯತ್ವ ಮಾಹಿತಿ

ಬೃಂದಾವನ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿಯಲ್ಲಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

## ಸೂಚನೆ:

ನ್ಯೂ ಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ .ವಾಣಿಯಲ್ಲಿ ಮೂಡಿಬರುವ ಅಂಕಣಗಳು- ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ,ನಾಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ.
**ನಾಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ,ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.


Copyright © KCO – Brindavana